WPP-47

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಮಾರ್ಚ್ ೨೯, ೨೦೧೨ (ಚೈತ್ರ ೯, ಶಕ ವರ್ಷ ೧೯೩೪)	ಸಂಚಿಕೆ ೧೩

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

PERSONNEL AND ADMINISTRATIVE REFORMS SECRETARIAT

NOTIFICATION

No: DPAR 47 SRR 2012, Bangalore, Dated: 6-3-2012.

In the Schedule to the Notification No. DPAR 21 SRR 2008 dated 3-8-2009 relating to identification of posts for physically handicapped persons for recruitment to State Civil Services Group-A and B posts the following shall be inserted at the end with immediate effect.

Sl. No.	Name of the Department	Blindness or low vision	Hearing Impairment	Locomotor disability
35	Department of Presecutions	-	Assistant Public Prosecutor-cum-Assistant Government Pleader (Group-B)	Assistant Public Prosecutor-cum-Assistant Government Pleader (Group-B)

By Order and in the name of the Governor of Karnataka,

DEVARAJU

Deputy Secretary to Government,

Department of Personnel & Administrative Reforms

(Service Rules)

P.R. 178

KARNATAKA GOVERNOR'S SECRETARIAT

NOTIFICATION

No: GS 08 KWU 2011 (P), Bangalore, Dated: 7th March, 2012.

WHEREAS, the term of Prof. Geetha Bali, Vice-Chancellor, Karnataka State Women's University, Bijapur expired on the afternoon of 29-1-2012.

WHEREAS, the Search Committee constituted under the provisions of Section 14 (2) of the Karnataka State Universities Act, 2000 has recommended a panel of names for appointment of one of them as the Vice-Chancellor, Karnataka State Women's University, Bijapur,

WHEREAS, the panel of names recommended by the Selection Committee has been considered.

Now, therefore, I. H.R. BHARDWAJ, Governor of Karnataka and Chancellor of Karnataka State Women's University, Bijapur, in exercise of the powers conferred on me by Section 14(4) of the Karnataka State Universities Act, 2000, keeping in view merit, equity and social justice, hereby appoint Dr. Meena Rajiv Chandavarkar, as the Vice-Chancellor of Karnataka State Women's University, Bijapur, for a period of 4(four) years with effect from the date of she assuming charge.

H.R. BHARDWAJ
Governor of Karnataka & Chancellor.
V.S. JERE
Under Secretary to Governor.

P.R. 179

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 219 ಮುನೋಮು 2011, ಬೆಂಗಳೂರು, ದಿನಾಂಕ : 6–3–2012.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು (ಕೆಪಿಟಿಸಿಎಲ್) ಒಂದು ಸರ್ಕಾರಿ ಸಮ್ಮದ ಸಂಸ್ಥೆಯಾಗಿರುವುದರಿಂದ, ಈ ಸಂಸ್ಥೆಯವರು ಸರ್ಕಾರದ ಇಂಧನ ಇಲಾಖೆ ಇವರಿಗೆ ವಿತರಿಸಲಿರುವ ರೂ. 452.06 ಕೋಟಿ ಮೌಲ್ಯದ ಷೇರು ಸರ್ಟಿಫಿಕೇಟ್‌ಗಳಿಗೆ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 9(1)(ಎ) ರನ್ವಯ ಶೇ. 50 ರಷ್ಟು ಮುದ್ರಾಂಕ ಶುಲ್ಕದಿಂದ ರಿಯಾಯಿತಿಯನ್ನು ನೀಡಲಾಗಿದೆ.

ಈ ಆದೇಶವನ್ನು ದಿನಾಂಕ : 28–2–2012ರ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 91 ವೆಚ್ಚ–7/2012 ರಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಕೆ. ರಾಮಚಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ).

ಪಿ.ಆರ್. 180

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 66 ಎಂಆರ್ಇ 2012, ಬೆಂಗಳೂರು, ದಿನಾಂಕ : 2ನೇ ಮಾರ್ಚ್, 2012.

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 11(1)(ix) ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಸಕಲೇಶಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಈ ಕೆಳಕಂಡ ಮೂವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿದೆ :

ಕ್ರ. ಸಂ.	ಸದಸ್ಯರ ಹೆಸರು ಶ್ರೀಯುತರು/ಶ್ರೀಮತಿ
01	ಕೆ. ತಿಮ್ಮಯ್ಯ ಬಿನ್ ವೆಂಕಟಯ್ಯ, ಅಗ್ರಹಾರ, ಸರಸ್ವತಿಪುರಂ, ಸಕಲೇಶಪುರ, ಹಾಸನ ಜಿಲ್ಲೆ.
02	ಕೋಮಲಾ ಕೋಂ ಜಗದೀಶ್, ದೇಖ್ಲ ಗ್ರಾಮ, ಕುಂಬರಡಿ ಅಂಚೆ, ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.
03	ರವಿ ಬಿನ್ ಎ.ಎಸ್. ಕರಿಯಪ್ಪಗೌಡ, ನೆಲಗಳಲೆ ಗ್ರಾಮ ಮತ್ತು ಅಂಚೆ, ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಸಿ.ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ–1
ಸಹಕಾರ ಇಲಾಖೆ.

ಪಿ.ಆರ್. 181

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 24 ಎಂಆರ್‌ಇ 2012, ಬೆಂಗಳೂರು, ದಿನಾಂಕ : 6ನೇ ಮಾರ್ಚ್, 2012.

ಸರ್ಕಾರದ ಅಧಿಸೂಚನೆ ಸಂಖ್ಯೆ : 158 ಎಂಆರ್‌ಇ (6) 2011, ದಿನಾಂಕ : 1–6–2011 ರಲ್ಲಿ ಪಾವಗಡ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಮಾಡಲಾಗಿರುವ ನಾಮ ನಿರ್ದೇಶನವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 11(1) (ix) ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಪಾವಗಡ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಈ ಕೆಳಕಂಡ ಮೂವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿದೆ :

ಕ್ರ. ಸಂ.	ಸದಸ್ಯರ ಹೆಸರು ಶ್ರೀಯುತರು/ಶ್ರೀಮತಿ
01	ಟಿ.ವಿ. ಜಗನ್ನಾಥ ಬಿನ್ ವಿಶ್ವನಾಥ, ವೈ.ಎನ್. ಹೊಸಕೋಟೆ, ಪಾವಗಡ ತಾಲ್ಲೂಕು.
02	ನರಸಿಂಹಪ್ಪ ಎನ್, ಮಾಜಿ ತಾಲ್ಲೂಕು ಪಂಚಾಯತ್ ಸದಸ್ಯರು, ಮುಗದಾಳ ಬೆಟ್ಟ ಪಾವಗಡ ತಾಲ್ಲೂಕು.
03	ಜಯರಾಮರೆಡ್ಡಿ ಬಿನ್ ಎಂಜಾರೆಡ್ಡಿ, ಬೆಳ್ಳಿ ಬಟ್ಟಲು, ಶೈಲಾಪುರ ಅಂಚೆ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಸಿ.ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ–1
ಸಹಕಾರ ಇಲಾಖೆ.

ಪಿ.ಆರ್. 182

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 323 ಎಂಆರ್‌ಇ 2011, ಬೆಂಗಳೂರು, ದಿನಾಂಕ : 1ನೇ ಮಾರ್ಚ್, 2012.

ಸರ್ಕಾರದ ಅಧಿಸೂಚನೆ ಸಂಖ್ಯೆ : ಸಇ 323 ಎಂಆರ್‌ಇ 2011, ದಿನಾಂಕ : 28/12/2011 ರಲ್ಲಿ ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಕ್ರಮ ಸಂಖ್ಯೆ ; (02) ರಲ್ಲಿ **"ಶ್ರೀ ಜಿ.ವಿ. ಬಸವರಾಜು ಬಿನ್ ಜಿ.ಬಿ. ವೀರಭದ್ರಪ್ಪ, ಗಂಜಿಗೆರೆ, ಅರಸೀಕೆರೆ ತಾಲ್ಲೂಕು"** ಇವರ ನಾಮ ನಿರ್ದೇಶನವನ್ನು ರದ್ದುಪಡಿಸಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 ರ ಕಲಂ 11(1) (ix) ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಇವರ ಬದಲಿಗೆ **"ಶ್ರೀ ಟಿ.ಆರ್. ವಿರೂಪಾಕ್ಷಪ್ಪ ಬಿನ್ ರಾಮೇಗೌಡ, ಅಗ್ರಹಾರ ಬಡಾವಣೆ, ಬಾಣಾವರ, ಅರಸೀಕೆರೆ ತಾಲ್ಲೂಕು"** ಇವರನ್ನು ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿದೆ :

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ಎಸ್. ವಿಶ್ವೇಶ್ವರಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ–2,
ಸಹಕಾರ ಇಲಾಖೆ.

ಪಿ.ಆರ್. 183

WATER RESOURCES SECRETARIAT

NOTIFICATION

No: WRD 14 CAM 2012, Bangalore, Dated: 3-3-2012.

In exercise of the powers conferred by clause (3) of section 2 of the Karnataka Command Areas Development Act 1980 (Karnataka Act 6 of 1980) read with section 21 of the Karnataka General Clauses Act 1899. (Karnataka Act 3 of 1899), the

Government of Karnataka hereby amends the Notification No. WRD 6 CAM 2004, Bangalore dated 30-10-2004 published in Karnataka Gazette dated 2-12-2004 as follows namely ;-

In the said notification, in the table, in the entries relating to "Malaprabha and Ghataprabha Project, Belgaum" at Sl. No. 2 in column (3), after the word " Gokak canal" the words "Shiggaon lift irrigation scheme (Irrigation achkat area coming under Shiggaon, Savanur & Hanagal Talukas of Haveri District)" shall be inserted.

By order and in the name of the Governor of Karnataka,

L. BYRAPPA

Under Secretary to Government,

Water Resources Department (CADA).

P.R. 184

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 109 ಎಲ್‌ಜಿಸಿ 2011, ಬೆಂಗಳೂರು, ದಿನಾಂಕ : 22–2–2012.

ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಸಬ್ ಸೆಕ್ಷನ್(1) ಸೆಕ್ಷನ್ 94–ಎ ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲೂಕಿನ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಕೆಳಕಂಡ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪುನರ್ ರಚಿಸಿ ಆದೇಶಿಸಿದೆ.

ಕ್ರ ಸಂ.	ತಾಲ್ಲೂಕು	ಸದಸ್ಯರು		
1.	ಚಿತ್ರದುರ್ಗ	1.	ಶ್ರೀ ಚಂದ್ರಪ್ಪ, ಶಾಸಕರು, ಹೊಳಲ್ಕೆರೆ	ಅಧ್ಯಕ್ಷರು
		2.	ಶ್ರೀ ಮಾಸ್ತಪ್ಪ ಬಿನ್ ಪಟ್ಟಪ್ಪ, ಚಿಕ್ಕಮರ ಗೊಲ್ಲರಹಟ್ಟಿ, ಚಿತ್ರದುರ್ಗ ಜಿಲ್ಲೆ	ಸದಸ್ಯರು (ಸಾಮಾನ್ಯ)
		3.	ಶ್ರೀ ಹೆಚ್. ತಿಪ್ಪೇಸ್ವಾಮಿ ಬಿನ್ ಹನುಮಂತಪ್ಪ ಪಿಳ್ಳೇಕೆರೆಹಳ್ಳಿ ಮೆದೆಹಳ್ಳಿ ಅಂಚೆ, ಚಿತ್ರದುರ್ಗ ಜಿಲ್ಲೆ	ಸದಸ್ಯರು (ಪ.ಜಾತಿ)
		4.	ಶ್ರೀಮತಿ ಮಂಜುಳಮ್ಮ ಕೋಂ ಹೊನ್ನೂರಪ್ಪ ಹಳಿಯೂರು ಅಂಚೆ, ಚಿತ್ರದುರ್ಗ ಜಿಲ್ಲೆ	ಸದಸ್ಯರು (ಮಹಿಳೆ)
		5.	ತಹಶೀಲ್ದಾರ್, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಈ ಸಂಬಂಧದಲ್ಲಿ ಹೊರಡಿಸಲಾಗಿದ್ದ ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ : 17 : ಎಲ್‌ಜಿಸಿ : 2010, ದಿನಾಂಕ : 11–5–2010ರ ಅಧಿಸೂಚನೆಯನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಜೆ ಲಕ್ಷ್ಮೀನಾರಾಯಣ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಮಂಜೂರಾತಿ–3).

ಪಿ.ಆರ್. 187

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 110 ಎಲ್‌ಜಿಸಿ 2011, ಬೆಂಗಳೂರು, ದಿನಾಂಕ : 24–2–2012.

ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಸಬ್ ಸೆಕ್ಷನ್(1) ಸೆಕ್ಷನ್ 94–ಎ ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕಿನ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಕೆಳಕಂಡ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪುನರ್ ರಚಿಸಿ ಆದೇಶಿಸಿದೆ.

ಕ್ರ. ಸಂ.	ತಾಲ್ಲೂಕು	ಸದಸ್ಯರು	
1.	ಹೊಸದುರ್ಗ	1. ಶ್ರೀ ಗೂಳಿಹಟ್ಟಿ ಡಿ. ಶೇಖರ, ಶಾಸಕರು, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ	ಅಧ್ಯಕ್ಷರು
		2. ಶ್ರೀ ದೇವರಾಜ ಎಸ್. ಬಿನ್ ಶಿವಣ್ಣ ಕಡದಿನಕೆರೆ, ವೆಂಗಳಾಪುರ ಅಂಚೆ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ	ಸದಸ್ಯರು (ಸಾಮಾನ್ಯ)
		3. ಶ್ರೀ ಆರ್. ಹನುಮಂತಪ್ಪ ಬಿನ್ ರಂಗಪ್ಪ, ಅನಿವಾಳ ಅಂಚೆ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ	ಸದಸ್ಯರು (ಪ.ಜಾತಿ)
		4. ಶ್ರೀಮತಿ ವಿ.ಬಿ. ಭಾರತಿ ಕೋಂ ಬಿ.ಇ. ವಿರೂಪಾಕ್ಷ, ಬನಸೀಹಳ್ಳಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ	ಸದಸ್ಯರು (ಮಹಿಳೆ)
		5. ತಹಶೀಲ್ದಾರ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಜಿ ಲಕ್ಷ್ಮೀನಾರಾಯಣ

ಪಿ.ಆರ್. 188

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಮಂಜೂರಾತಿ–3).

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 4 ಎಲ್‌ಜಿಡಿ 2012, ಬೆಂಗಳೂರು, ದಿನಾಂಕ : 18–2–2012.

ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಸಬ್ ಸೆಕ್ಷನ್(1) ಸೆಕ್ಷನ್ 94–ಎ ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕಿನ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಕೆಳಕಂಡ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪುನರ್ ರಚಿಸಿ ಆದೇಶಿಸಿದೆ.

ಕ್ರ. ಸಂ.	ತಾಲ್ಲೂಕು	ಸದಸ್ಯರು	
1.	ಧಾರವಾಡ	1. ಸೀಮಾ ಅಶೋಕ ಮಸೂತಿ, ಶಾಸಕರು, ಧಾರವಾಡ ತಾಲ್ಲೂಕು	ಅಧ್ಯಕ್ಷರು
		2. ಶ್ರೀ ಸುನೀಲ ಪ. ಮೋರೆ, ಮುನ್ಸಿಪಲ್ ಕಾಲನಿ, ಎಂ.ಬಿ. ನಗರ, ಧಾರವಾಡ ಜಿಲ್ಲೆ	ಸದಸ್ಯರು (ಸಾಮಾನ್ಯ)
		3. ಶ್ರೀ ತುಳಸಪ್ಪ ಪುಜಾರ, ಲಕ್ಷ್ಮೀಸಿಂಗನಕೇರಿ, ಧಾರವಾಡ ಜಿಲ್ಲೆ	ಸದಸ್ಯರು (ಪ.ಜಾತಿ)
		4. ಶ್ರೀಮತಿ ಸುಜಾತ ಕಳ್ಳಿಮನಿ ಪಾಟೀಲ ನಿವಾಸ, 2ನೇ ಕ್ರಾಸ್, ರಜತಗಿರಿ, ಧಾರವಾಡ ಜಿಲ್ಲೆ	ಸದಸ್ಯರು (ಮಹಿಳೆ)
		5. ತಹಶೀಲ್ದಾರ್, ಧಾರವಾಡ ತಾಲ್ಲೂಕು, ಧಾರವಾಡ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಜಿ ಲಕ್ಷ್ಮೀನಾರಾಯಣ

ಪಿ.ಆರ್. 189

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಮಂಜೂರಾತಿ–3).

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 13 ಎಲ್‌ಜಿಟಿ 2010, ಬೆಂಗಳೂರು, ದಿನಾಂಕ : 18–2–2012.

ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಸಬ್ ಸೆಕ್ಷನ್(1) ಸೆಕ್ಷನ್ 94–ಎ ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ತುಮಕೂರು ಜಿಲ್ಲೆ, ಪಾವಗಡ ತಾಲ್ಲೂಕಿನ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಕೆಳಕಂಡ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪುನರ್ ರಚಿಸಿ ಆದೇಶಿಸಿದೆ.

ಕ್ರ. ಸಂ.	ತಾಲ್ಲೂಕು	ಸದಸ್ಯರು	
1.	ಪಾವಗಡ	1. ಶ್ರೀ ವೆಂಕಟರಮಣಪ್ಪ, ಶಾಸಕರು	ಅಧ್ಯಕ್ಷರು
		2. ಶ್ರೀ ಶ್ರೀನಿವಾಸ ಬಿನ್ ವೆಂಕಟರೆಡ್ಡಿ, ಮಾಚರಾಜನಹಳ್ಳಿ, ಗೌಡೇಟಿ ಅಂಚೆ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ	ಸದಸ್ಯರು (ಸಾಮಾನ್ಯ)
		3. ಶ್ರೀ ರವಿಕುಮಾರ್ ಬಿನ್ ಸಣ್ಣಾಯಪ್ಪ, 16ನೇ ವಾರ್ಡ್, ಪಾವಗಡ ಟೌನ್, ತುಮಕೂರು ಜಿಲ್ಲೆ	ಸದಸ್ಯರು (ಪ.ಜಾತಿ)
		4. ಶ್ರೀಮತಿ ಜಯಮ್ಮ ಕೋಂ ಅಂಜಿನರೆಡ್ಡಿ, ಪೋಲೇನಹಳ್ಳಿ ಸಾಸಲುಕುಂಟೆ ಅಂಚೆ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ.	ಸದಸ್ಯರು (ಮಹಿಳೆ)
		5. ತಹಶೀಲ್ದಾರ್, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಜಿ ಲಕ್ಷ್ಮೀನಾರಾಯಣ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಮಂಜೂರಾತಿ–3).

ಪಿ.ಆರ್. 190

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 260 ಎಲ್‌ಆರ್‌ಎ 2010, ಬೆಂಗಳೂರು, ದಿನಾಂಕ : 23–12–2011.

ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 48ರ ಉಪ ಕಲಂ (1) ರಿಂದ (3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಎಲ್ಲಾ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನಗಳನ್ನು ರದ್ದುಪಡಿಸಿ ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಸದರಿ ಭೂ ನ್ಯಾಯ ಮಂಡಳಿಗಳನ್ನು ಪುನರ್ ರಚಿಸಿ ಆದೇಶ ಹೊರಡಿಸಿದೆ.

ಭೂ ನ್ಯಾಯ ಮಂಡಳಿಯ ಹೆಸರು	ಅಧಿಕಾರೇತರ ಸದಸ್ಯರ ಹೆಸರು ಮತ್ತು ವಿಳಾಸ
ಚಿಂಚೋಳಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ	1. ಶ್ರೀ ಮಾನಿಕರಾವ್ ಅಡೆಪ್ಪ, (ಪರಿಶಿಷ್ಟ ಜಾತಿ) ಸಾ: ಕುಂಚಾವರಂ, ತಾಲ್ಲೂಕು ಚಿಂಚೋಳಿ ಜಿಲ್ಲೆ ಗುಲ್ಬರ್ಗಾ 2. ಶ್ರೀ ಜಗದೀಶ್ ಬಸವಣ್ಣಪ್ಪ ಕೋಕಟ, ಸಾ : ಹಲಕೂಡ, ತಾಲ್ಲೂಕು ಚಿಂಚೋಳಿ ಜಿಲ್ಲೆ, ಗುಲ್ಬರ್ಗಾ. 3. ಶ್ರೀ ವಿಠಲರೆಡ್ಡಿ ಕೃಷ್ಣಾರೆಡ್ಡಿ ಎಲಮೂರ, ಸಾ: ಬೆನಕಿಪಳ್ಳಿ ತಾಲ್ಲೂಕು ಚಿಂಚೋಳಿ ಜಿಲ್ಲೆ ಗುಲ್ಬರ್ಗಾ. 4. ಶ್ರೀ ಭೀಮಸೇನರಾವ್ ವೆಂಕಟರಾವ್ ಕುಲಕರ್ಣಿ, ಸಾ: ಮೋಘಾ, ತಾಲ್ಲೂಕು ಚಿಂಚೋಳಿ ಜಿಲ್ಲೆ ಗುಲ್ಬರ್ಗಾ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ನಾರಾಯಣ ಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಸುಧಾರಣೆ).

ಪಿ.ಆರ್. 1159

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 138 ಎಲ್‌ಆರ್‌ಎ 2010, ಬೆಂಗಳೂರು, ದಿನಾಂಕ : 28–12–2011.

ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 48ರ ಉಪ ಕಲಂ (1) ರಿಂದ (3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಎಲ್ಲಾ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನಗಳನ್ನು ರದ್ದುಪಡಿಸಿ, ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಸದರಿ ಭೂ ನ್ಯಾಯ ಮಂಡಳಿಗಳನ್ನು ಪುನರ್ ರಚಿಸಿ ಆದೇಶ ಹೊರಡಿಸಿದೆ.

ಭೂ ನ್ಯಾಯ ಮಂಡಳಿಯ ಹೆಸರು	ಅಧಿಕಾರೇತರ ಸದಸ್ಯರ ಹೆಸರು ಮತ್ತು ವಿಳಾಸ
ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ	1. ಶ್ರೀ ಎಂ. ಶೇಖರ ರೆಡ್ಡಿ, ಬೇಸ್ತವಾರಪೇಟೆ, ರಾಯಚೂರು 2. ಶ್ರೀ ಜೆ. ಪರಶುರಾಮ, ವಕೀಲರು, (ಪರಿಶಿಷ್ಟ ಜಾತಿ) ಹರಿಜನವಾಡ, ರಾಯಚೂರು 3. ಶ್ರೀ ಜೆ. ಬಸವರಾಜ ಪ್ರಜಾರಿ ಕಲ್ಮಾಲ, ಮುಕ್ಕಾಂ ಮತ್ತು ಪೋಸ್ಟ್ ಕಲಮಲಾ, ರಾಯಚೂರು ತಾಲ್ಲೂಕು, ಮತ್ತು ಜಿಲ್ಲೆ. 4. ಶ್ರೀ ವೆಂಕಟರೆಡ್ಡಿ, ಹೊಸಪೇಟೆ, ಮುಕ್ಕಾಂ ಪೋಸ್ಟ್ ಹೊಸಪೇಟೆ, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ನಾರಾಯಣ ಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಸುಧಾರಣೆ).

ಪಿ.ಆರ್. 1160

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 342 ಎಲ್‌ಆರ್‌ಎ 2011, ಬೆಂಗಳೂರು, ದಿನಾಂಕ : 2–1–2012.

ಕರ್ನಾಟಕ ಭೂ ಸುಧಾರಣೆ ಅಧಿನಿಯಮ (961)ದ ಕಲಂ 48ರ ಉಪ ಕಲಂ (1) ರಿಂದ (3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಲಾದ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನ ರದ್ದುಪಡಿಸಿ ಅವರ ಬದಲಿಗೆ ಈ ಕೆಳಕಂಡ ವ್ಯಕ್ತಿಗಳನ್ನು ಅಧಿಕಾರೇತರ ಸದಸ್ಯರನ್ನಾಗಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಸದರಿ ಭೂ ನ್ಯಾಯ ಮಂಡಳಿಗಳನ್ನು ಪುನಃ ರಚಿಸಲು ಆದೇಶಿಸಿದೆ.

ಹೆಸರು ಮತ್ತು ವಿಳಾಸ
1. ಶ್ರೀ ಕೃಷ್ಣಮೂರ್ತಿ ಬಿನ್. ರಾಮಪ್ಪ ಸಾಣೇಹಳ್ಳಿ, ಹೊಸದುರ್ಗ ತಾಲ್ಲೂಕು. (ಪರಿಶಿಷ್ಟ ಜಾತಿ)
2. ಶ್ರೀ ರತ್ನಾಕರ್ ಶೇಠ್, ಬಿನ್. ಅನಂತ ಶೇಠ್, ಜಂಗಮ ನಗರ, ಹೊಸದುರ್ಗ.
3. ಶ್ರೀ ಹೆಚ್.ಪಿ. ಜಗದೀಶ ಬಿನ್. ಪರಮೇಶ್ವರಪ್ಪ, ಹೊಸದುರ್ಗ.
4. ಶ್ರೀ ಲಿಂಗದೇವರು ಬಿನ್. ತಿಪ್ಪೇಸ್ವಾಮಿ, ಅರಲಹಳ್ಳಿ, ಕಸಬಾ ಹೋಬಳಿ, ಹೊಸದುರ್ಗ ತಾಲ್ಲೂಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ನಾರಾಯಣ ಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಸುಧಾರಣೆ).

ಪಿ.ಆರ್. 09

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 264 ಎಲ್‌ಆರ್‌ಎ 2009, ಬೆಂಗಳೂರು, ದಿನಾಂಕ : 5–1–2012.

ಕರ್ನಾಟಕ ಭೂ ಸುಧಾರಣೆ ಅಧಿನಿಯಮ (1961) ರ ಕಲಂ 48ರ ಉಪ ಕಲಂ (1) ರಿಂದ (3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನ ರದ್ದುಪಡಿಸಿ, ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಸದರಿ ಭೂ ನ್ಯಾಯ ಮಂಡಳಿ ಪುನಃ ರಚಿಸಲು ಆದೇಶಿಸಿದೆ.

ಭೂ ನ್ಯಾಯ ಮಂಡಳಿಯ ಹೆಸರು	ಹೆಸರು ಮತ್ತು ವಿಳಾಸ
ಕಾರವಾರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ	1. ಶ್ರೀಮತಿ ಸುಜಾತಾ ಸುರೇಂದ್ರ ಪಾಟೀಲ ಅಂಚೆ : ತೋಡುರು, ಕಾರವಾರ ತಾ: ಉತ್ತರ ಕನ್ನಡ ಜಿಲ್ಲೆ (3–ಬಿ) 2. ಶ್ರೀ ಕಮಲಾಕರ ರಾಯಾ ಸುಧೀರ, ಅಂಚೆ : ಅಸ್ನೋಟಿ, ಕಾರವಾರ ತಾ: ಉತ್ತರ ಕನ್ನಡ ಜಿಲ್ಲೆ. (2–ಎ) 3. ಶ್ರೀ ರಾಜೇಶ ಅನಂತ ನಾಯ್ಕ, ಅಂಚೆ : ಸಿದ್ದರ, ಕಾರವಾರ ತಾ: ಉತ್ತರ ಕನ್ನಡ ಜಿಲ್ಲೆ, (3–ಬಿ) 4. ಶ್ರೀ ಚಂದ್ರ ಕಾಂತ ಬಾಬು ಅಗೇರ, ಅಂಚೆ : ಅಮದಳ್ಳಿ, ಕಾರವಾರ ತಾ: ಉತ್ತರ ಕನ್ನಡ ಜಿಲ್ಲೆ. (ಪರಿಶಿಷ್ಟ ಜಾತಿ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎನ್. ನಾರಾಯಣ ಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಸುಧಾರಣೆ).

ಪಿ.ಆರ್. 23

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 125 ಎಲ್‌ಆರ್‌ಎ 2009, ಬೆಂಗಳೂರು, ದಿನಾಂಕ : 5–1–2012.

ಕರ್ನಾಟಕ ಭೂ ಸುಧಾರಣೆ ಅಧಿನಿಯಮ (1961) ರ ಕಲಂ 48ರ ಉಪ ಕಲಂ (1) ರಿಂದ (3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನ ರದ್ದುಪಡಿಸಿ, ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಸದರಿ ಭೂ ನ್ಯಾಯ ಮಂಡಳಿ ಪುನಃ ರಚಿಸಲು ಆದೇಶಿಸಿದೆ.

ಭೂ ನ್ಯಾಯ ಮಂಡಳಿಯ ಹೆಸರು	ಹೆಸರು ಮತ್ತು ವಿಳಾಸ
ಕೆ.ಆರ್. ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ	1. ಶ್ರೀ ಮಹೇಶ್ ಬಿನ್ ಚೌಡಯ್ಯ ಹರಿಜನ ಕಾಲೋನಿ, ಸಿಂಧುಘಟ್ಟ ಶೀಳನೆರೆ ಹೋಬಳಿ, ಕೆ.ಆರ್. ಪೇಟೆ ತಾಲ್ಲೂಕು. (ಪರಿಶಿಷ್ಟ ಜಾತಿ) 2. ಶ್ರೀ ಎಸ್.ಎನ್. ಭದ್ರಪ್ಪ ಬಿನ್. ನಾಗಪ್ಪ ಸಂತೇಬಾಚನಹಳ್ಳಿ, ಕೆ.ಆರ್. ಪೇಟೆ ತಾಲ್ಲೂಕು. 3. ಶ್ರೀ ವಾಸುದೇವೇಗೌಡ ಹೆಚ್.ಕೆ. ಬಿನ್. ಕಾಳೇಗೌಡ ಹೆಗ್ಗಡಹಳ್ಳಿ ಅಂಚೆ, ಕಸಬಾ ಹೋಬಳಿ, ಕೆ.ಆರ್. ಪೇಟೆ ತಾಲ್ಲೂಕು. 4. ಶ್ರೀ ಡಿ.ವಿ. ಕುಮಾರ್ ಬಿನ್ ವೆಂಕಟರಮಣೇಗೌಡ ದೊಡ್ಡಿಗಾಡಿಗನಹಳ್ಳಿ, ಬೂಕನಕೆರೆ ಹೋಬಳಿ, ಕೆ.ಆರ್. ಪೇಟೆ ತಾಲ್ಲೂಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎನ್. ನಾರಾಯಣ ಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಸುಧಾರಣೆ).

ಪಿ.ಆರ್. 22

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 219 ಎಲ್‌ಆರ್‌ಎ 2009, ಬೆಂಗಳೂರು, ದಿನಾಂಕ : 13–12–2011.

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961 ರ ಕಲಂ 48ರ ಉಪ ಕಲಂ (1) ರಿಂದ (3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಎಲ್ಲಾ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನಗಳನ್ನು ರದ್ದುಪಡಿಸಿ, ಅವರ ಬದಲಿಗೆ ಈ

ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಸದರಿ ಭೂ ನ್ಯಾಯ ಮಂಡಳಿಗಳನ್ನು ಪುನರ್ ರಚಿಸಿ ಆದೇಶ ಹೊರಡಿಸಿದೆ.

ಭೂ ನ್ಯಾಯ ಮಂಡಳಿಯ ಹೆಸರು	ಅಧಿಕಾರೇತರ ಸದಸ್ಯರ ಹೆಸರು ಮತ್ತು ವಿಳಾಸ
ಕೋಟ ಭೂ ನ್ಯಾಯ ಮಂಡಳಿ ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ	1. ಶ್ರೀ ಪ್ರವೀಣಾ ಶೆಟ್ಟಿ, ಬಿನ್ ಚಂದ್ರಶೇಖರ ಶೆಟ್ಟಿ, ಕಟ್ಟಿಮನೆ ವಂಡಾರು ಗ್ರಾಮ ಮತ್ತು ಅಂಚೆ ಉಡುಪಿ ತಾಲ್ಲೂಕು. 2. ಶ್ರೀ ಶಿವರಾಮ ಉಡುಪ ಬಿನ್ ಶ್ರೀನಿವಾಸ ಉಡುಪ ಶ್ರೀ ಕಾರ್ತಿಕೇಯ ಸಾಲಿಗ್ರಾಮ ಅಂಚೆ ಉಡುಪಿ ತಾ: 3. ಶ್ರೀಮತಿ ಜ್ಯೋತಿ ಉದಯ ಕುಮಾರ್, ಕೋಂ ಉದಯ ಕುಮಾರ್, ಐರೋಡಿ ಸಾಸ್ತಾನ ಉಡುಪಿ ತಾಲ್ಲೂಕು. 4. ಶ್ರೀ ಸತೀಶ್ ಬಿನ್ ಕುಷ್ಠ ಮಣೂರು ದ್ಯಾವಸ ಉಡುಪಿ ತಾಲ್ಲೂಕು. (ಪರಿಶಿಷ್ಟ ಜಾತಿ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎನ್. ನಾರಾಯಣ ಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಸುಧಾರಣೆ).

ಪಿ.ಆರ್. 18

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 335 ಎಲ್‌ಆರ್‌ಎ 2011, ಬೆಂಗಳೂರು, ದಿನಾಂಕ : 5–1–2012.

ಕರ್ನಾಟಕ ಭೂ ಸುಧಾರಣೆ ಅಧಿನಿಯಮ (1961) ರ ಕಲಂ 48ರ ಉಪ ಕಲಂ (1) ರಿಂದ (3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಎಲ್ಲಾ ಅಧಿಕಾರೇತರ ಸದಸ್ಯರ ನಾಮನಿರ್ದೇಶನಗಳನ್ನು ರದ್ದುಪಡಿಸಿ, ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಸದರಿ ಭೂ ನ್ಯಾಯ ಮಂಡಳಿಗಳನ್ನು ಪುನರ್ ರಚಿಸಿ ಆದೇಶ ಹೊರಡಿಸಿದೆ.

ಭೂ ನ್ಯಾಯ ಮಂಡಳಿಯ ಹೆಸರು	ಅಧಿಕಾರೇತರ ಸದಸ್ಯರ ಹೆಸರು ಮತ್ತು ವಿಳಾಸ
ಚನ್ನರಾಯ ಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ	1. ಶ್ರೀ ರಂಗೇಗೌಡ ಬಿನ್ ರಂಗೇಗೌಡ ಓಬಳಾಪುರ, ಬಾಗೂರು ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ. 2. ಶ್ರೀ ಹೆಚ್.ಸಿ. ಶಿವಣ್ಣ ಬಿನ್ ಚಿಕ್ಕೇಗೌಡ, ಹೊಸಹಳ್ಳಿ, ನುಗ್ಗೇಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ. 3. ಶ್ರೀ ಜೆ.ಸಿ. ಬಸವರಾಜು ಬಿನ್ ಚಿಕ್ಕೇರೇಗೌಡ, ಜಂಬೂರು, ನುಗ್ಗೇಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ. 4. ಶ್ರೀ ಎಂ.ಆರ್. ರಂಗಸ್ವಾಮಿ ಬಿನ್ ರಾಮಯ್ಯ ಮತಿಗಟ್ಟ, ಹಿರಿಸಾವೆ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ. (ಪರಿಶಿಷ್ಟ ಜಾತಿ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎನ್. ನಾರಾಯಣ ಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಸುಧಾರಣೆ).

ಪಿ.ಆರ್. 21

ಯುವಜನ ಸೇವಾ ಸಚಿವಾಲಯ

ಸಂಖ್ಯೆ:ಯುಸೇಇ 129 ಸಮನ 2011 ಬೆಂಗಳೂರು, ದಿನಾಂಕ: 25–02–2012.


ಅಧಿಸೂಚನೆ

ವಿಷಯ:– ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1)(ಬಿ) ಪ್ರಕಾರ ಯುವಜನ ಸೇವಾ ಇಲಾಖೆಯ ಮಾಹಿತಿ ಕೈಪಿಡಿ ಪ್ರಕಟಿಸುವ ಬಗ್ಗೆ.

ಉಲ್ಲೇಖ:– ದಿನಾಂಕ:31.07.2010 ರ ಅಧಿಸೂಚನೆ ಸಂಖ್ಯೆ: ಯುಸೇಇ 159 ಸಮನ 09

ಉಲ್ಲೇಖಿತ ಅಧಿಸೂಚನೆಯಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1)(ಬಿ) ಪ್ರಕಾರ ಪ್ರಕಟಿಸಲಾಗಿದ್ದ ಯುವಜನ ಸೇವಾ ಇಲಾಖೆಯ ಕೈಪಿಡಿಯನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

4.(1)ಬಿ(i)ಸಂಸ್ಥೆಯ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು



ಈ ಇಲಾಖೆಯ ವಿವಿಧ ಶಾಖೆಗಳಲ್ಲಿ ಈ ಕೆಳಕಂಡ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ:

ಯುವಜನ ಸೇವಾ ಶಾಖೆ:

1) ಕರ್ನಾಟಕ ಕ್ರೀಡಾ ಪ್ರಾಧಿಕಾರಕ್ಕೆ ಸಂಬಂಧಿಸಿದ ವಿಷಯಗಳು.
2) ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡಮಿಗೆ ಸಂಬಂಧಿಸಿದ ವಿಷಯಗಳು.
3) ಯುವಜನ ಸೇವೆಗಳು ಮತ್ತು ಕ್ರೀಡಾ ಇಲಾಖೆಯ ಹಲವು ಯೋಜನಾಭಿವೃದ್ಧಿ ಹಾಗೂ ಕ್ರೀಡಾಭಿವೃದ್ಧಿ ಕುರಿತಾದ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳ ಅನುಷ್ಠಾನ ಕುರಿತಾದ ವಿಷಯಗಳು
4) ರಾಷ್ಟ್ರೀಯ ಕ್ರೀಡೆಗಳಿಗೆ ಸಂಬಂಧಿಸಿದ ವಿಷಯಗಳು.
5) ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಗೆ ಸಂಬಂಧಿಸಿದ ವಿಷಯಗಳು.
6) ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮೀಣ ಮಟ್ಟದಲ್ಲಿ ಕ್ರೀಡಾ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕುರಿತಾದ ವಿಷಯಗಳು.
7) ಜಿಲ್ಲಾ ಕ್ರೀಡಾಂಗಣಗಳು, ಕ್ರೀಡಾ ಸಮುಚ್ಚಯಗಳ ನಿರ್ಮಾಣ ಕುರಿತಂತೆ ಆಡಳಿತಾತ್ಮಕ ಅನುಮೋದನೆ ಇತ್ಯಾದಿ ವಿಷಯಗಳು, ರಾಜ್ಯ ವಲಯದಿಂದ ಅನುದಾನ ಬಿಡುಗಡೆ ಮಾಡುವ ಹಾಗೂ ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ(ಪೈಕಾ) ಇತ್ಯಾದಿ ಕೇಂದ್ರ ಸರ್ಕಾರದ ಸಹಾಯಾನುದಾನ ಕುರಿತಾದ ವಿಷಯಗಳು,
8) ಯುವ ಪ್ರಶಸ್ತಿಗಳ ಕುರಿತಾದ ವಿಷಯಗಳ ನಿರ್ವಹಣೆ.
9) ಅಖಿಲ ಭಾರತ ನಾಗರೀಕ ಸೇವಾ ಕ್ರೀಡಾ ಪಂದ್ಯದಲ್ಲಿ ಭಾಗವಹಿಸುವ ಸರ್ಕಾರಿ ನೌಕರರ ಆಯ್ಕೆ ಹಾಗೂ ನಿಯೋಜನೆ ಕುರಿತಾದ ಪ್ರಸ್ತಾವನೆಗಳ ನಿರ್ವಹಣೆ.
10) ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣ ಕುರಿತಂತೆ ಆಡಳಿತಾತ್ಮಕ ಅನುಮೋದನೆ ನೀಡುವ ಹಾಗೂ ಕೇಂದ್ರ ಸರ್ಕಾರದ ಸಹಾಯಾನುದಾನ ಪಡೆಯುವ ಕುರಿತಂತೆ ಪ್ರಸ್ತಾವ ಸಲ್ಲಿಸುವ ಬಗೆಗಿನ ವಿಷಯಗಳು.
11) ಸರ್ಕಾರಿ ವೈಮಾನಿಕ ತರಬೇತಿ ಶಾಲೆಗೆ ಸಂಬಂಧಿಸಿದ ವಿಷಯಗಳ ನಿರ್ವಹಣೆ.
12) ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ ಕರ್ನಾಟಕ ವಿಧಾನ ಸಭೆ:ವಿಧಾನ ಪರಿಷತ್ ಪ್ರಶ್ನೆಗಳು, ಭರವಸೆಗಳು, ಅರ್ಜಿಗಳು, ಗಮನ ಸೆಳೆಯುವ ಸೂಚನೆಗಳು, ಇತ್ಯಾದಿ ಹಾಗೂ ನ್ಯಾಯಾಲಯ ಪ್ರಕರಣಗಳು.
13) ರಾಷ್ಟ್ರೀಯ ಸೇವಾ ಯೋಜನಾ ವಿಷಯಕ್ಕೆ ಸಂಬಂಧಿಸಿದ ವಿಷಯಗಳು.

ಸ್ವೀಕೃತಿ ಮತ್ತು ರವಾನೆ ಶಾಖೆ:

1) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಿಸಿದ ಸೇವಾ ವಿಷಯಗಳು ಹಾಗೂ ಇದಕ್ಕೆ ಸಂಬಂಧಿಸಿದಂತೆ ವಿಧಾನಸಭೆ:ವಿಧಾನಪರಿಷತ್ ಪ್ರಶ್ನೆಗಳು, ಭರವಸೆಗಳು, ಅರ್ಜಿಗಳು ಗಮನ ಸೆಳೆಯುವ ಸೂಚನೆಗಳು ಇತ್ಯಾದಿ ಹಾಗೂ ನ್ಯಾಯಾಲಯ ಪ್ರಕರಣಗಳು.
2) ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ ಸಭೆಗಳು ಹಾಗೂ ಮಾಸಿಕ ಕಾರ್ಯಕ್ರಮ ಅನುಷ್ಠಾನ ವೇಳಾಪಟ್ಟಿ(ಎಂಪಿಕ್) ಸಭೆಗಳ ಕುರಿತು ಸಂಯೋಜನಾ ಕ್ರಮ.
3) ಸಮನ್ವಯ ಶಾಖೆಗೆ ಅನ್ವಯಿಸುವ ಎಲ್ಲ ವಿಷಯಗಳು, ವಿಧಾನಸಭೆ: ವಿಧಾನ ಪರಿಷತ್ ಪ್ರಶ್ನೆಗಳು.

ಆಂತರಿಕ ಆರ್ಥಿಕ ಸಲಹೆಗಾರರ (ಆಯವ್ಯಯ) ಶಾಖೆ:

1) ಕಂದಾಯ ಇಲಾಖೆ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಿಸಿದ ಆಯವ್ಯಯ ತಯಾರಿಕೆ
2) ಮೇಲ್ಕಂಡ ಇಲಾಖೆಗಳಿಗೆ ಸಂಬಂಧಿಸಿದ ಆಡಿಟ್ ಆಕ್ಷೇಪಣೆ: ಸಿಎಜಿ ಕಂಡಿಕೆಗಳ ಪರಿಶೀಲನೆ.
3) ಆಯವ್ಯಯ ಲೆಕ್ಕಶೀರ್ಷಿಕೆಗೆ ಸಂಬಂಧಿಸಿದ ವಿಷಯಗಳು
4) ಮಹಾಲೇಖಪಾಲರ ತಪಾಸಣಾ ವರದಿ,ಕರಡು ಕಂಡಿಕೆಗಳು, ಸಿ.ಎ.ಜಿ. ರವರ ವರದಿ ಹಾಗೂ ಸಾರ್ವಜನಿಕ ಲೆಕ್ಕಪತ್ರ ವರದಿಗಳ ಕುರಿತಾದ ವಿಷಯಗಳ ನಿರ್ವಹಣೆ.

ಆಂತರಿಕ ಆರ್ಥಿಕ ಸಲಹೆಗಾರರ (ಅಭಿಪ್ರಾಯ) ಶಾಖೆ

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಿಸಿದ ಸೇವಾ ವಿಷಯ ಹಾಗೂ ಅನುದಾನ ಬಿಡುಗಡೆ ಇತ್ಯಾದಿ ಪ್ರಸ್ತಾವನೆಗಳಿಗೆ ಅಭಿಪ್ರಾಯ ನೀಡುವುದು.

ರಾಷ್ಟ್ರೀಯ ಸೇವಾ ಯೋಜನಾ ಕೋಶ:

1) ರಾಜ್ಯದ ಎಲ್ಲಾ ವಿಶ್ವವಿದ್ಯಾಲಯ/ನಿರ್ದೇಶನಾಲಯಗಳ ಎನ್.ಎಸ್.ಎಸ್. ಚಟುವಟಿಕೆಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ.

2) ವಿಶ್ವವಿದ್ಯಾಲಯ/ನಿರ್ದೇಶನಾಲಯಗಳಿಗೆ ಸರಿಯಾದ ಸಮಯಕ್ಕೆ ಅನುದಾನ ಬಿಡುಗಡೆ

3) ವಿಶ್ವವಿದ್ಯಾಲಯ/ನಿರ್ದೇಶನಾಲಯಗಳ ಎನ್.ಎಸ್.ಎಸ್.ಸಲಹಾ ಸಮಿತಿ ಸಭೆ; ವಿಚಾರ ಸಂಕೀರ್ಣ, ಕಾರ್ಯಗಾರ ಇತರೆ ಕಾರ್ಯಕ್ರಮಗಳಿಗೆ ಸರ್ಕಾರದ ಪರವಾಗಿ ಭಾಗವಹಿಸುವುದು.

4) ಸರ್ಕಾರದ ನಿಯಮಾವಳಿಗಳ ರೀತ್ಯಾ ಅನುದಾನವನ್ನು ಬಳಕೆ ಮಾಡಲಾಗಿದೆಯೇ ಎಂಬ ಬಗ್ಗೆ ಪರಿವೀಕ್ಷಣೆ ಮಾಡುವುದು.

5) ಲೆಕ್ಕ ಪತ್ರದ ವರದಿಗಳು, ಕಾರ್ಯಕ್ರಮಗಳ ವರದಿಗಳು ಕಾಲಾನುಕಾಲಕ್ಕೆ ಬರುವಂತೆ ನೋಡಿಕೊಳ್ಳುವುದು.

6) ರಾಜ್ಯ ಮಟ್ಟದ ಎನ್.ಎಸ್.ಎಸ್. ಸಲಹಾ ಸಮಿತಿ ಸಭೆಯನ್ನು ಏರ್ಪಡಿಸುವುದು.

7) ಅಂತರ ಇಲಾಖಾ ಕಾರ್ಯಕ್ರಮಗಳನ್ನು ಆಯೋಜಿಸುವುದು.

ಅ) ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯೊಂದಿಗೆ ರಾಷ್ಟ್ರೀಯ ಕೋಟೆ, ಸ್ಮಾರಕಗಳ ರಕ್ಷಣೆ.

ಆ) ಕ್ರೆಡಿಲ್‌ನ ಸಹಯೋಗದೊಂದಿಗೆ ಎನರ್ಜಿ ಕ್ಲಬ್‌ಗಳನ್ನು ಕಾಲೇಜುಗಳಲ್ಲಿ ಸ್ಥಾಪನೆ ಮಾಡುವುದು.

ಇ) ರಾಜ್ಯ ಏಡ್ಸ್ ಸೊಸೈಟಿಯೊಂದಿಗೆ ಕಾಲೇಜು ಏಡ್ಸ್ ಶಿಕ್ಷಣ ಕಾರ್ಯಕ್ರಮ(ಎಲ್ಲಾ ಕಾಲೇಜುಗಳಲ್ಲಿ)

ಈ) ಉಚಿತ ಕಾನೂನು ನೆರವು ಶಿಬಿರಗಳು:ಕಾರ್ಯಗಾರಗಳು, ವಿಪತ್ತು ನಿರ್ವಹಣಾ ಕಾರ್ಯಕ್ರಮ.

ಉ) ಇನ್ನಿತರ ಕಾರ್ಯಕ್ರಮಗಳನ್ನು ಆಯಾ ಕಾಲಕ್ಕನುಗುಣವಾಗಿ ಏರ್ಪಡಿಸುವುದು.

8) ರಾಜ್ಯ ಮಟ್ಟದ ಕಾರ್ಯಕ್ರಮಗಳಾದ, ರಾಜ್ಯ ಗಣರಾಜ್ಯೋತ್ಸವ ಪಥ ಸಂಚಲನ ತರಬೇತಿ ಪಥ ಸಂಚಲನದಲ್ಲಿ ಭಾಗವಹಿಸುವುದು, ರಾಜ್ಯ ಮಟ್ಟದ ಎನ್.ಎಸ್.ಎಸ್.ಪ್ರಶಸ್ತಿ ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮ ಕಾರ್ಯಗಾರಗಳು, ಎನ್.ಎಸ್.ಎಸ್. ವಿಚಾರ ಸಂಕೀರ್ಣಗಳು ಹಾಗೂ ಇತರೆ ರಾಜ್ಯ ಮಟ್ಟದ ಶಿಬಿರಗಳನ್ನು ಸಂಘಟಿಸುವುದು.

9) ಅನುದಾನಕ್ಕೆ ಸಂಬಂಧಿಸಿದಂತೆ, ಲೆಕ್ಕ ಪರಿಶೋಧನೆ ಹಾಗೂ ಇತರೆ ವರದಿಗಳನ್ನು ಕ್ರೋಢೀಕರಿಸಿ ಮಹಾಲೇಖಪಾಲರು ಮತ್ತು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವುದು.

10) ಎಲ್ಲಾ ವಿಶ್ವವಿದ್ಯಾಲಯ:ನಿರ್ದೇಶನಾಲಯಗಳ ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳ ನೇಮಕಾತಿ ಸಮಿತಿ ಸಭೆಯಲ್ಲಿ ಭಾಗವಹಿಸುವುದು.

4(1) (b)(ii) ಸಂಸ್ಥೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ಅಧಿಕಾರ ಮತ್ತು ಕರ್ತವ್ಯಗಳ ವಿವರ

ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಇಲಾಖಾ ಸಚಿವರ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳಿಗೊಳಪಟ್ಟು ಮತ್ತು ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು 1977ರ ನಿಯಮಗಳಿಗೆ ಒಳಪಟ್ಟು ಯುವಜನಸೇವಾ ಮತ್ತು ಕ್ರೀಡಾ ಇಲಾಖೆ, ಸರ್ಕಾರಿ ವೈಮಾನಿಕ ತರಬೇತಿ ಶಾಲೆಗೆ ಸಂಬಂಧಿಸಿದಂತೆ ವ್ಯವಹಾರ ನಿರ್ವಣೆಯ ಜವಾಬ್ದಾರಿ ಹೊಂದಿರುತ್ತಾರೆ.

ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು 1977ರ ನಿಯಮ 7 ಮತ್ತು 30.

ಸರ್ಕಾರದ ಉಪ ಕಾರ್ಯದರ್ಶಿ:

ಪ್ರಧಾನ ಕಾರ್ಯದರ್ಶಿರವರ ನಂತರದ ಅಧಿಕಾರಿಯಾಗಿರುತ್ತಾರೆ. ಇಲಾಖಾ ಸಚಿವರು, ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿರವರು ನೀಡುವ ಸೂಚನೆಗಳ ಪ್ರಕಾರ ಕಾರ್ಯನಿರ್ವಹಿಸುತ್ತಾರೆ. ಈ ಇಲಾಖೆಗೆ ಸಂಬಂಧಪಟ್ಟಂತೆ ಸಂಘಟನೆ ಮತ್ತು ವಿಧಾನಾಧಿಕಾರಿಯಾಗಿರುತ್ತಾರೆ.

ಇವರು ಇಲಾಖೆಗೆ ಸಂಬಂಧಿಸಿದ ಶಾಖೆಗಳ ಮೇಲ್ವಿಚಾರಕರಾಗಿರುತ್ತಾರೆ. ಇಲಾಖೆಗಳಲ್ಲಿನ ಎಲ್ಲಾ ಕಡತಗಳು, ಕಾಗದ ಪತ್ರಗಳು ಮತ್ತು ದಾಖಲೆಗಳನ್ನು ಇವರು ಪರಿಶೀಲಿಸುತ್ತಾರೆ. ಪ್ರಕರಣಗಳ ವಿಲೇವಾರಿ ಬಗ್ಗೆ ಕ್ರಮ ಜರುಗಿಸುವುದು ಹಾಗೂ ಪ್ರಮುಖ ವಿಷಯಗಳ ಮೇಲಿನ ಕ್ರಮದ ಬಗ್ಗೆ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ಪ್ರಸ್ತಾವನೆಗಳನ್ನು ಮಂಡಿಸುತ್ತಾರೆ.

ಸಂಪರ್ಕಾಧಿಕಾರಿ (ರಾಷ್ಟ್ರೀಯ ಸೇವಾ ಯೋಜನಾ ಕೋಶ)ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ:

ಇವರು ರಾಜ್ಯ ಎನ್‌ಎಸ್‌ಎಸ್ ಕೋಶದ ಮೇಲುಸ್ತುವಾರಿಯಲ್ಲಿ,ವಿಶ್ವವಿದ್ಯಾಲಯ /ನಿರ್ದೇಶನಾಲಯಗಳ ಮುಖಾಂತರ ಎನ್‌ಎಸ್‌ಎಸ್ ಚಟುವಟಿಕೆಗಳ ಮೇಲ್ವಿಚಾರಣೆ, ಕಾಲೇಜು ಮಟ್ಟದಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಅಭಿವೃದ್ಧಿಗೊಳಿಸುವ ಮೇಲುಸ್ತುವಾರಿ ಕಾರ್ಯ ನಿರ್ವಹಿಸುತ್ತಾರೆ. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯ/ ನಿರ್ದೇಶನಾಲಯಗಳ ಎನ್.ಎಸ್.ಎಸ್. ಚಟುವಟಿಕೆಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ; ವಿಶ್ವವಿದ್ಯಾಲಯ/ ನಿರ್ದೇಶನಾಲಯಗಳಿಗೆ ಅನುದಾನ ಬಿಡುಗಡೆ;ವಿಶ್ವವಿದ್ಯಾಲಯ/ನಿರ್ದೇಶನಾಲಯಗಳ ಎನ್.ಎಸ್.ಎಸ್. ಸಲಹಾ ಸಮಿತಿ ಸಭೆ; ವಿಚಾರ ಸಂಕೀರ್ಣ, ಕಾರ್ಯಗಾರ, ಇತರೆ ಕಾರ್ಯಕ್ರಮಗಳಿಗೆ ಸರ್ಕಾರದ ಪರವಾಗಿ ಭಾಗವಹಿಸುವುದು;ಸರ್ಕಾರದ ನಿಯಮಾವಳಿಗಳ ರೀತ್ಯಾ ಅನುದಾನವನ್ನು ಬಳಕೆ

ಮಾಡಲಾಗಿದೆಯೇ ಎಂಬ ಬಗ್ಗೆ ಪರಿವೀಕ್ಷಣೆ ಮಾಡುವುದು;ಲೆಕ್ಕ ಪತ್ರದ ವರದಿಗಳು, ಕಾರ್ಯಕ್ರಮಗಳ ವರದಿಗಳು ಕಾಲಾನುಕಾಲಕ್ಕೆ ಬರುವಂತೆ ನೋಡಿಕೊಳ್ಳುವುದು; ರಾಜ್ಯ ಮಟ್ಟದ ಎನ್.ಎಸ್.ಎಸ್. ಸಲಹಾ ಸಮಿತಿ ಸಭೆಯನ್ನು ಏರ್ಪಡಿಸುವುದು; ಅನುದಾನಕ್ಕೆ ಸಂಬಂಧಿಸಿದಂತೆ, ಲೆಕ್ಕ ಪರಿಶೋಧನೆ ಹಾಗೂ ಇತರೆ ವರದಿಗಳನ್ನು ಕ್ರೋಢೀಕರಿಸಿ ಮಹಾಲೇಖಪಾಲರು ಮತ್ತು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವುದು; ಎಲ್ಲಾ ವಿಶ್ವವಿದ್ಯಾಲಯ:ನಿರ್ದೇಶನಾಲಯಗಳ ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳ ನೇಮಕಾತಿ ಸಮಿತಿ ಸಭೆಯಲ್ಲಿ ಭಾಗವಹಿಸುವುದು, ಇತ್ಯಾದಿ ಇವರ ಪ್ರಮುಖ ಕರ್ತವ್ಯಗಳಾಗಿರುತ್ತದೆ.

ಆಂತರಿಕ ಆರ್ಥಿಕ ಸಲಹೆಗಾರರು:

ಯುವಜನ ಸೇವಾ ಇಲಾಖೆಯ ಆಯವ್ಯಯ, ಮುಂಗಡ, ಲೆಕ್ಕತನಿಖೆ ಆಕ್ಷೇಪಣೆ, ಆಡಿಟ್ ಪ್ಯಾರಾ, ತನಿಖಾ ವರದಿ, ಆಯವ್ಯಯ ಮಾಹಿತಿಗಳನ್ನು ಆರ್ಥಿಕ ಇಲಾಖೆಗೆ ನೀಡುವುದು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಮತ್ತು ಸರ್ಕಾರಿ ವೈಮಾನಿಕ ತರಬೇತಿ ಶಾಲೆಗೆ ಸಂಬಂಧಪಟ್ಟ ಯೋಜನೆ ಮತ್ತು ಯೋಜನೇತರ ಆಯವ್ಯಯ/ ಹಣಕಾಸು ವಿಷಯದ ಬಗ್ಗೆ ಅಭಿಪ್ರಾಯ ನೀಡುತ್ತಾರೆ.

ಸರ್ಕಾರದ ಅಧೀನ ಕಾರ್ಯದರ್ಶಿ:

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಆದೇಶಗಳನ್ನು ಹೊರಡಿಸುವ ಅಧಿಕಾರಿಯಾಗಿರುತ್ತಾರೆ. ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು 1977ರ ನಿಯಮ 19 ಕಾರ್ಯನಿರ್ವಹಣೆ ಸಂಬಂಧದಲ್ಲಿ ಹಾಗೂ ಶಿಸ್ತಿನ ಸಂಬಂಧದಲ್ಲಿ ತನ್ನ ಪ್ರಭಾರದಲ್ಲಿರುವ ಶಾಖೆಯ ನಿಯಂತ್ರಣಾಧಿಕಾರವನ್ನು ಚಲಾಯಿಸುತ್ತಾರೆ. ಕಡತಗಳನ್ನು ಉಪಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ರವರಿಗೆ ಸಲ್ಲಿಸುತ್ತಾರೆ.

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಹಾಗೂ ಸರ್ಕಾರಿ ವೈಮಾನಿಕ ತರಬೇತಿ ಶಾಲೆಗೆ ಸಂಬಂಧಿಸಿದ ವಿಷಯಗಳ ಕುರಿತಂತೆ ಯುವಜನ ಸೇವಾ ಶಾಖೆ ಹಾಗೂ ಸ್ವೀಕೃತಿ ಮತ್ತು ರವಾನೆ ಶಾಖೆಯ ಪೀಠಾಧಿಕಾರಿ/ಶಾಖಾಧಿಕಾರಿಯವರಿಂದ ಸಲ್ಲಿಸಲ್ಪಟ್ಟ ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಮಂಡಿಸುವುದು, ಪ್ರತಿ ತಿಂಗಳು ಮಾಸಿಕ ಕಾರ್ಯಕ್ರಮ ಅನುಷ್ಠಾನ ವೇಳಾಪಟ್ಟಿ(ಎಂಪಿಕ್) ಸಭೆಗೆ ಹಾಜರಾಗಿ ವಿವಿಧ ವಿಷಯಗಳ ಬಗ್ಗೆ ಮುಂದಿನ ಕ್ರಮ ಜರುಗಿಸುವುದು, ವಿಧಾನಸಭೆ/ವಿಧಾನಪರಿಷತ್ತು ಪ್ರಶ್ನೆಗಳಿಗೆ ಉತ್ತರವನ್ನು ತಯಾರಿಸುವುದು ಇತ್ಯಾದಿ ಹಾಗೂ ಕರ್ನಾಟಕ ಸಚಿವಾಲಯ ಕೈಪಿಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಕಾರ್ಯನಿರ್ವಹಿಸುತ್ತಾರೆ.

ಪೀಠಾಧಿಕಾರಿ (ಯುವಜನ ಸೇವಾ ಇಲಾಖೆ):

ಇವರು ಶಾಖೆಯ ಮೇಲ್ವಿಚಾರಣೆಯ ಕಾರ್ಯನಿರ್ವಹಿಸುತ್ತಾರೆ. ಶಾಖೆಯ ಸಿಬ್ಬಂದಿಗಳ ಮೇಲ್ವಿಚಾರಣೆ ನಡೆಸುವುದು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಸರ್ಕಾರಿ ವೈಮಾನಿಕ ತರಬೇತಿ ಶಾಲೆಗಳಿಗೆ ಸಂಬಂಧಿಸಿದಂತೆ, ಇಲಾಖಾ ಮುಖ್ಯಸ್ಥರುಗಳಿಂದ ಸ್ವೀಕೃತವಾಗುವ ಎಲ್ಲಾ ಯೋಜನೆ/ಯೋಜನೇತರ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಪ್ರಸ್ತಾವನೆಗಳ ಹಾಗೂ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಅಧಿಕಾರಿಗಳ ಸೇವಾ ವಿಷಯ ಇವೇ ಮುಂತಾದವುಗಳ ಬಗ್ಗೆ ಸಹಾಯಕರು/ಹಿರಿಯಸಹಾಯಕರುಗಳಿಂದ ಮಂಡಿಸಲಾದ ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿ ಆದೇಶಕ್ಕಾಗಿ ಕಡತವನ್ನು ಮೇಲಾಧಿಕಾರಿಗಳಿಗೆ ಮಂಡಿಸುತ್ತಾರೆ.

ಶಾಖಾಧಿಕಾರಿ (ಸ್ವೀಕೃತಿ ಮತ್ತು ರವಾನೆ ಶಾಖೆ):

ಇಲಾಖೆಗೆ ಬರುವ ಎಲ್ಲ ಕಾಗದಪತ್ರಗಳನ್ನು ಸ್ವೀಕರಿಸುವುದು. ಸ್ವೀಕರಿಸಿದ ಪತ್ರಗಳನ್ನು ಸಂಬಂಧಿಸಿದ ಶಾಖೆಗಳಿಗೆ ರವಾನಿಸುವುದು. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಹಾಗೂ ಕರ್ನಾಟಕ ಕ್ರೀಡಾ ಪ್ರಾಧಿಕಾರಕ್ಕೆ ಸಂಬಂಧಿಸಿದ ಅಧಿಕಾರಿಗಳ ಸೇವಾ ವಿಷಯಗಳ ಬಗ್ಗೆ ಹಾಗೂ ಈ ಇಲಾಖೆಗೆ ಸಂಬಂಧಿಸಿದ ಎಲ್ಲಾ ಸಂಯೋಜನಾ ವಿಷಯಗಳ ಬಗ್ಗೆ ಸಹಾಯಕರು/ಹಿರಿಯ ಸಹಾಯಕರಿಂದ ಸಲ್ಲಿಸಲ್ಪಟ್ಟ ಕಡತಗಳನ್ನು ಪರಿಶೀಲಿಸಿ ಆದೇಶಕ್ಕಾಗಿ ಕಡತವನ್ನು ಮೇಲಾಧಿಕಾರಿಗಳಿಗೆ ಮಂಡಿಸುತ್ತಾರೆ.

ಶಾಖಾಧಿಕಾರಿ (ಆಂತರಿಕ ಆರ್ಥಿಕ ಸಲಹೆಗಾರರ ಅಭಿಪ್ರಾಯ ಶಾಖೆ):

ಯುವಜನ ಸೇವಾ ಇಲಾಖೆಗೆ ಸಂಬಂಧಿಸಿದ ಆಡಳಿತಾತ್ಮಕ ಶಾಖೆಗಳಿಂದ ಬಂದ ಸಿಬ್ಬಂದಿಗಳ ಸೇವಾ ವಿಷಯಗಳು ಹಾಗೂ ಹಣಕಾಸಿಗೆ ಸಂಬಂಧಿಸಿದ ಪ್ರಸ್ತಾವನೆಗಳ ಬಗ್ಗೆ ಸಹಾಯಕರು/ಹಿರಿಯ ಸಹಾಯಕರಿಂದ ಮಂಡಿಸಲ್ಪಟ್ಟ ಕಡತಗಳನ್ನು ಪರಿಶೀಲಿಸಿ, ಆಂತರಿಕ ಆರ್ಥಿಕ ಸಲಹೆಗಾರರಿಗೆ ಕಡತವನ್ನು ಮಂಡಿಸುತ್ತಾರೆ.

ಶಾಖಾಧಿಕಾರಿ (ಆಂತರಿಕ ಆರ್ಥಿಕ ಸಲಹೆಗಾರರ ಆಯವ್ಯಯ ಶಾಖೆ):

ಯುವಜನ ಸೇವಾ ಇಲಾಖೆಗೆ ಸಂಬಂಧಿಸಿದ ಆಯವ್ಯಯ ತಯಾರಿಕೆ ಹಾಗೂ ಆಡಿಟ್ ಆಕ್ಷೇಪಣೆಗಳ ಬಗ್ಗೆ ಸಹಾಯಕರು/ ಹಿರಿಯಸಹಾಯಕರಿಂದ ಮಂಡಿಸಲ್ಪಟ್ಟ ಕಡತಗಳನ್ನು ಪರಿಶೀಲಿಸಿ, ಆಂತರಿಕ ಆರ್ಥಿಕ ಸಲಹೆಗಾರರಿಗೆ ಕಡತವನ್ನು ಮಂಡಿಸುತ್ತಾರೆ.

ಹಿರಿಯ ಸಹಾಯಕರು (ಯುವಜನ ಸೇವಾ ಶಾಖೆ):

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿಯಂತೆ ಕಾರ್ಯನಿರ್ವಹಿಸುವುದು ಸೇರಿದಂತೆ, ಕರ್ನಾಟಕ ಕ್ರೀಡಾ ಪ್ರಾಧಿಕಾರಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳು; ಯುವಪ್ರಶಸ್ತಿ ಮತ್ತು ಕ್ರೀಡಾ ಪ್ರಶಸ್ತಿಗಳ ಕುರಿತಾದ ವಿಷಯಗಳ ನಿರ್ವಹಣೆ; ಅಖಿಲ ಭಾರತ ನಾಗರೀಕ ಸೇವಾ ಕ್ರೀಡಾ ಪಂದ್ಯದಲ್ಲಿ

ಭಾಗವಹಿಸುವ ಸರ್ಕಾರಿ ನೌಕರರ ಆಯ್ಕೆ ಹಾಗೂ ನಿಯೋಜನೆ ಕುರಿತಾದ ಪ್ರಸ್ತಾವಗಳ ನಿರ್ವಹಣೆ;ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮೀಣ ಮಟ್ಟದಲ್ಲಿ ಕ್ರೀಡಾ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕುರಿತಾದ ವಿಷಯಗಳು; ಜಿಲ್ಲಾ ಕ್ರೀಡಾಂಗಣಗಳು, ಕ್ರೀಡಾ ಸಮುಚ್ಚಯಗಳ ನಿರ್ಮಾಣ ಕುರಿತಂತೆ ಆಡಳಿತಾತ್ಮಕ ಅನುಮೋದನೆ ನೀಡುವ, ರಾಜ್ಯ ವಲಯದಿಂದ ಅನುದಾನ ಬಿಡುಗಡೆ ಮಾಡುವ ಹಾಗೂ ಕೇಂದ್ರ ಸರ್ಕಾರದ ಸಹಾಯಾನುದಾನ ಕೋರಿ ಪ್ರಸ್ತಾವ ಸಲ್ಲಿಸುವ ಕುರಿತಾದ ವಿಷಯಗಳು;ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣ ಕುರಿತಂತೆ ಆಡಳಿತಾತ್ಮಕ ಅನುಮೋದನೆ ನೀಡುವ ಕೇಂದ್ರ ಸರ್ಕಾರದ ಸಹಾಯಾನುದಾನ ಪಡೆಯುವ ಕುರಿತಾದ ಪ್ರಸ್ತಾವನೆ ಬಗೆಗಿನ ವಿಷಯಗಳು.

ಈ ವಿಷಯಗಳಿಗೆ ಸಂಬಂಧಿಸಿದಂತೆ ವಿಧಾನಸಭೆ:ವಿಧಾನಪರಿಷತ್ ಪ್ರಶ್ನೆಗಳು.ಭರವಸೆಗಳು,ಅರ್ಜಿಗಳು, ಗಮನಸೆಳೆಯುವ ಸೂಚನೆಗಳು ಇತ್ಯಾದಿ ಹಾಗೂ ನ್ಯಾಯಾಲಯ ಪ್ರಕರಣಗಳು.

ಹಿರಿಯ ಸಹಾಯಕರು (ಸ್ವೀಮರ ಶಾಖೆ):

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿಯಂತೆ ಕಾರ್ಯನಿರ್ವಹಿಸುವುದು ಸೇರಿದಂತೆ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಿಸಿದಂತೆ ಸೇವಾ ವಿಷಯಗಳ ನಿರ್ವಹಣೆ ಅದಕ್ಕೆ ಸಂಬಂಧಿಸಿದಂತೆ ವಿಧಾನಸಭೆ, ವಿಧಾನ ಪರಿಷತ್ ಪ್ರಶ್ನೆಗಳು ಇತ್ಯಾದಿ ಹಾಗೂ ನ್ಯಾಯಾಲಯಗಳ ಪ್ರಕರಣಗಳು.

ಹಿರಿಯ ಸಹಾಯಕರು (ಆಂತರಿಕ ಆರ್ಥಿಕ ಸಲಹೆಗಾರರ ಆಯವ್ಯಯ ಶಾಖೆ):

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿಯಂತೆ ಕಾರ್ಯನಿರ್ವಹಿಸುವುದು ಸೇರಿದಂತೆ, ಯುವಜನ ಸೇವಾ ಇಲಾಖೆಗೆ ಸಂಬಂಧಿಸಿದ ಆಯವ್ಯಯ ತಯಾರಿಕೆ ಹಾಗೂ ಆಡಿಟ್ ಆಕ್ಷೇಪಣೆ ವಿಷಯಗಳು. ಮಹಾಲೇಖಪಾಲರ ತಪಾಸಣಾ ವರದಿ, ಕರಡು ಕಂಡಿಕೆಗಳು, ಸಿ.ಎ.ಜಿ.ರವರ ವರದಿ ಹಾಗೂ ಸಾರ್ವಜನಿಕ ಲೆಕ್ಕಪತ್ರ ವರದಿಗಳ ಕುರಿತಾದ ವಿಷಯಗಳು ನಿರ್ವಹಣೆ.

ಹಿರಿಯ ಸಹಾಯಕರು (ಅಭಿಪ್ರಾಯ ಶಾಖೆ):

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿಯಂತೆ ಕಾರ್ಯನಿರ್ವಹಿಸುವುದು ಸೇರಿದಂತೆ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಹಾಗೂ ಸರ್ಕಾರಿ ವೈಮಾನಿಕ ತರಬೇತಿ ಶಾಲೆಗೆ ಸಂಬಂಧಪಟ್ಟ ಸೇವಾ ವಿಷಯಗಳ ನಿರ್ವಹಣೆ.

ಸಹಾಯಕರು (ಯುವಜನ ಸೇವಾ ಶಾಖೆ):

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿಯಂತೆ ಕಾರ್ಯನಿರ್ವಹಿಸುವುದು ಸೇರಿದಂತೆ, ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡಮಿಗೆ ಸಂಬಂಧಿಸಿದ ವಿಷಯಗಳು. ಯುವಜನ ಸೇವೆಗಳು ಮತ್ತು ಕ್ರೀಡಾ ಇಲಾಖೆಯ ಹಲವು ಯುವಜನಾಭಿವೃದ್ಧಿ ಹಾಗೂ ಕ್ರೀಡಾಭಿವೃದ್ಧಿ ಕುರಿತಾದ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳ ಅನುಷ್ಠಾನ ಕುರಿತಾದ ವಿಷಯಗಳ ಸಂಸ್ಕರಣೆ, ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ (ಪೈಕಾ) ಯೋಜನೆಯ ವಿಷಯಗಳು, ಇತ್ಯಾದಿ ಅನುದಾನ ಬಿಡುಗಡೆ ಕುರಿತಾದ ಆದೇಶ ಹೊರಡಿಸುವಿಕೆ ವಿಷಯಗಳ ನಿರ್ವಹಣೆ.

ಸಹಾಯಕರು (ಸ್ವೀಮರ ಶಾಖೆ):

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿಯಂತೆ ಕಾರ್ಯನಿರ್ವಹಿಸುವುದು ಸೇರಿದಂತೆ,ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ ಸಭೆಗಳು ಹಾಗೂ ವಿವಿಧ ಹಂತದ ಮಾಸಿಕ ಪ್ರಗತಿ ಪರಿಶೀಲನ ಸಭೆ ಹಾಗೂ ಇತರ ಸಭೆಗಳ ಕುರಿತು ಸಂಯೋಜನಾಕ್ರಮ. ವಿಧಾನಸಭೆ/ವಿಧಾನಪರಿಷತ್ ಸಾಮಾನ್ಯ ಪ್ರಶ್ನೆಗಳು, ಭರವಸೆಗಳು, ಇತ್ಯಾದಿಗಳ ಸಂಯೋಜನಾ ವಿಷಯ:ಇಲಾಖೆಗೆ ಸಂಬಂಧಿಸಿದ ಉಳಿದೆಲ್ಲ ವಿಷಯಗಳ ನಿರ್ವಹಣೆ.

ಸಹಾಯಕರು (ಆಯವ್ಯಯ ಶಾಖೆ):

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿಯಂತೆ ಕಾರ್ಯನಿರ್ವಹಿಸುವುದು ಸೇರಿದಂತೆ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಪಟ್ಟ ಪ್ರಸ್ತಾವನೆಗಳಿಗೆ ಹಣ ಬಿಡುಗಡೆ ಮಾಡುವ ವಿಷಯಗಳ ಪರಿಶೀಲನೆ ಹಾಗೂ ಇತರೆ ವಿಷಯಗಳ ನಿರ್ವಹಣೆ.

ಸಹಾಯಕರು (ಅಭಿಪ್ರಾಯ ಶಾಖೆ):

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿಯಂತೆ ಕಾರ್ಯನಿರ್ವಹಿಸುವುದು ಸೇರಿದಂತೆ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಪಟ್ಟಂತೆ ಅಭಿಪ್ರಾಯಕ್ಕಾಗಿ ಸ್ವೀಕರಿಸಿದ ಪ್ರಸ್ತಾವನೆಗಳನ್ನು ಪರಿಶೀಲಿಸುವುದು ಹಾಗೂ ಇತರೆ ವಿಷಯಗಳು.

ಅಕೌಂಟೆಂಟ್(ಲೆಕ್ಕಾಧಿಕಾರಿ):

ರಾಷ್ಟ್ರೀಯ ಸೇವಾ ಯೋಜನಾ ವಿಷಯಕ್ಕೆ ಸಂಬಂಧಿಸಿದಂತೆ, ಲೆಕ್ಕಪತ್ರ, ನಗದು ಪುಸ್ತಕಗಳ ನಿರ್ವಹಣೆ, ಲೆಕ್ಕಪತ್ರ ಕ್ರೋಢೀಕರಣ, ಮಹಾಲೇಖಪಾಲರ ಆಡಿಟ್ ಪ್ಯಾರ, ಎಂ.ಎಂ.ಆರ್./ಆಯವ್ಯಯ ತಯಾರಿಕೆ, ಅನುದಾನ ಮರುಪಾವತಿ, ಸಂಬಳದ ಬಿಲ್ಲುಗಳು ಇವೇ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ಆಪ್ತಕಾರ್ಯದರ್ಶಿ ಗ್ರೇಡ್–2:

ಇವರು ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರ ನಿರ್ದೇಶನಗಳಿಗೆ ಒಳಪಟ್ಟು ಕಾರ್ಯನಿರ್ವಹಿಸುತ್ತಾರೆ.

ಸಹಾಯಕರು (ರಾಷ್ಟ್ರೀಯ ಸೇವಾ ಯೋಜನಾ ಕೋಶ):

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿಯಂತೆ ಕಾರ್ಯನಿರ್ವಹಿಸುವುದು ಸೇರಿದಂತೆ ರಾಷ್ಟ್ರೀಯ ಸೇವಾ ಯೋಜನಾ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲ ವಿಶ್ವವಿದ್ಯಾಲಯ/ನಿರ್ದೇಶನಾಲಯಗಳ ಸಾಮಾನ್ಯ ಕಾರ್ಯನಿರ್ವಹಣೆ, ವಿಶೇಷ ಶಿಬಿರಗಳಿಗೆ ಅನುಮೋದನೆ ನೀಡುವ ಬಗ್ಗೆ ಪರಿಶೀಲನೆ, ಸಲಹಾ ಸಮಿತಿ ಸಭೆಗೆ ಸಂಬಂಧಿಸಿದವಿಷಯಗಳು, ಇತ್ಯಾದಿ..ಬಗ್ಗೆ ಪರಿಶೀಲಿಸಿ ಕಡತವನ್ನು ರಾಜ್ಯ ಸಂಪರ್ಕಾಧಿಕಾರಿಯವರಿಗೆ ಮಂಡಿಸುತ್ತಾರೆ.

ಶೀಘ್ರಲಿಪಿಗಾರರು:

ಇವರು ಅಧಿಕಾರಿಗಳಿಂದ ಉಕ್ತಲೇಖನವನ್ನು ಪಡೆದು ಪತ್ರಗಳನ್ನು ಮತ್ತು ವರದಿಗಳನ್ನು ತಯಾರಿಸಿ ಅಧಿಕಾರಿಗಳಿಗೆ ಬರುವ ಕಾಗದಪತ್ರಗಳು ಹಾಗೂ ಕಡತಗಳನ್ನು ಸ್ವೀಕರಿಸುವುದು, ಸಭೆ/ಸಮಿತಿಗಳ ದಿನಾಂಕಗಳನ್ನು ಗುರುತಿಸಿ, ಅಧಿಕಾರಿಗಳಿಗೆ ನೆನಪಿಸುವುದು ಹಾಗೂ ಕಡತಗಳನ್ನು ಪಡೆದು ಸಲ್ಲಿಸುವುದು, ಸಭೆಯ ನಡವಳಿಗಳನ್ನು ತಗೆದುಕೊಂಡು ಕರಡನ್ನು ತಯಾರಿಸುವುದು, ಗಣಕಯಂತ್ರದ ಮೂಲಕ ಎಲ್‌ಎಂಎಸ್/ ಎಫ್‌ಎಂಎಸ್ ನಿರ್ವಹಿಸುವುದು ಹಾಗೂ ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿಯಂತೆ ಕಾರ್ಯನಿರ್ವಹಿಸುವುದು.

ಬೆರಳಚ್ಚುಗಾರ:

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿಯಂತೆ ಕಾರ್ಯನಿರ್ವಹಿಸುವುದು ಸೇರಿದಂತೆ ಶಾಖೆಯಲ್ಲಿನ ಎಲ್ಲ ಬೆರಳಚ್ಚು ಕೆಲಸಗಳನ್ನು ನಿರ್ವಹಿಸುವುದು.

ವಾಹನ ಚಾಲಕರು: ವಾಹನವನ್ನು ಸುಸ್ಥಿತಿಯಲ್ಲಿಟ್ಟು, ವಾಹನ ಚಾಲನೆ ಕಾರ್ಯನಿರ್ವಹಿಸುತ್ತಾರೆ.

ದಲಾಯತ್:

ಇವರು ಕಛೇರಿಗಳನ್ನು ಸ್ವಚ್ಛವಾಗಿಡುವುದು ಪತ್ರಗಳನ್ನು ಮತ್ತು ಕಡತಗಳನ್ನು ವಿವಿಧ ಶಾಖೆಗಳಿಗೆ/ ಇಲಾಖೆಗಳಿಗೆ ನಿಯಮಾನುಸಾರ ನೀಡುವುದು ಮುಕ್ತಾಯಗೊಳಿಸಿದ ಕಡತಗಳನ್ನು ಸರಿಯಾಗಿ ಹೊಲೆದು ದಾಖಲೆಗಳ ಕೊಠಡಿಗೆ ತಗೆದುಕೊಂಡು ಹೋಗುವ ಇವೇ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತಾರೆ.

<u>4(1) (ಬಿ) iii– ನಿರ್ಣಯ ತಗೆದುಕೊಳ್ಳುವಲ್ಲಿ ಅನುಸರಿಸಲಾಗುವ ವಿಧಿ ವಿಧಾನಗಳು ಮತ್ತು ಪರಿವೀಕ್ಷಣೆ ಮತ್ತು ಜವಾಬ್ದಾರಿಗಳು</u>

ಯಾವುದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಶಾಖೆಯಲ್ಲಿ ಸ್ವೀಕರಿಸುವ ಟಪಾಲಿನ ಹಂತದಲ್ಲಿ ಅಧೀನ ಕಾರ್ಯದರ್ಶಿಗೆ ಸಲ್ಲಿಸುವುದು, ನಂತರ ಇದನ್ನು ಶಾಖಾಧಿಕಾರಿ ನೋಡಿ ಸಹಿ ಹಾಕಿದ ನಂತರ ಕಿರಿಯ ಸಹಾಯಕರು, ಗಣಕಯಂತ್ರದಲ್ಲಿ ವಿಷಯವನ್ನು ನಮೂದಿಸಿ ಸಂಖ್ಯೆ ಗುರುತಿಸಿ ಸಂಬಂಧಪಟ್ಟ ಹಿರಿಯ ಸಹಾಯಕರ/ಸಹಾಯಕರಿಗೆ ನೀಡುವುದು. ಹಿರಿಯ ಸಹಾಯಕರು/ಸಹಾಯಕರು ಸ್ವೀಕೃತಿಯ ಕುರಿತು ಪರಿಶೀಲಿಸಿ ಅವಶ್ಯವಿರುವ ನಿಯಮ ಸೂಚನೆ ಪ್ರತಿಗಳು ಹಾಗೂ ಈ ಬಗ್ಗೆ ಈಗಾಗಲೇ ಕಡತ ಪ್ರಾರಂಭಿಸಲಾಗಿದ್ದಲ್ಲಿ ಅದರೊಂದಿಗೆ ಶಾಖಾಧಿಕಾರಿಗೆ ಸಲ್ಲಿಸಬೇಕು. ಶಾಖಾಧಿಕಾರಿ ಟಿಪ್ಪಣಿಯನ್ನು ಪರಿಶೀಲಿಸಿ ತಮ್ಮ ಟಿಪ್ಪಣಿಯನ್ನು ಸ್ಪಷ್ಟವಾಗಿ ದಾಖಲಿಸಿ ಅಧೀನ ಕಾರ್ಯದರ್ಶಿಗಳಿಗೆ ಸಲ್ಲಿಸತಕ್ಕದ್ದು. ಹೆಚ್ಚುವರಿ ಮಾಹಿತಿ ಅವಶ್ಯವಿದ್ದಲ್ಲಿ ಅವುಗಳನ್ನು ಪಡೆಯಲು ಅಧೀನ ಕಾರ್ಯದರ್ಶಿಯು ಸೂಚಿಸಿ ಕಡತ ಹಿಂದಿರುಗಿಸತಕ್ಕದ್ದು. ಇದನ್ನು ಅನುಸರಿಸಿ ಕ್ಷೇತ್ರ ಇಲಾಖೆಗಳಿಂದ ಮಾಹಿತಿ ಪಡೆಯಲು ಕರಡು ಪತ್ರವನ್ನು ಮಂಡಿಸಿ ಶಾಖಾಧಿಕಾರಿ ಹಾಗೂ ಅಧೀನ ಕಾರ್ಯದರ್ಶಿಯವರ ಹಂತದಲ್ಲಿ ಅನುಮೋದನೆ ಪಡೆದು ಅವಶ್ಯ ಪತ್ರವನ್ನು ಹೊರಡಿಸುವುದು, ಮಾಹಿತಿ ಬಂದ ನಂತರ ಅಥವಾ ಅವಶ್ಯವಿಲ್ಲದಿದ್ದಲ್ಲಿ, ಮೇಲೆ ಸೂಚಿಸಿದ ಹಂತವನ್ನು ಅನುಸರಿಸಿ ಅಧೀನ ಕಾರ್ಯದರ್ಶಿಯವರಿಗೆ ಸಲ್ಲಿಸತಕ್ಕದ್ದು. ಅಧೀನ ಕಾರ್ಯದರ್ಶಿಯವರ ಸ್ಪಷ್ಟವಾದ ಅಭಿಪ್ರಾಯವನ್ನು ದಾಖಲಿಸಿ, ಆರ್ಥಿಕ ಅಥವಾ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಥವಾ ಕಾನೂನು ಇಲಾಖೆ ಇತ್ಯಾದಿ ಇಲಾಖೆಗಳ ಸಮಾಲೋಚನೆ ಅವಶ್ಯವಿದ್ದಲ್ಲಿ ಸಲ್ಲಿಸತಕ್ಕದ್ದು. ಅಪರ/ಸಹ/ಉಪಕಾರ್ಯದರ್ಶಿಯವರ ಹಂತದಲ್ಲಿ ಅವಶ್ಯವಿದ್ದಲ್ಲಿ ಸಂಬಂಧಪಟ್ಟ ಇಲಾಖೆಗಳೊಡನೆ ಸಮಾಲೋಚಿಸಿ ಅಭಿಪ್ರಾಯ ಪಡೆದ ನಂತರ, ಅಧಿಕಾರ ಪ್ರತ್ಯಾಯೋಜನೆಯನ್ನು ದಾಖಲಿಸಿ ಕಾರ್ಯದರ್ಶಿಯವರಿಗೆ ಸಲ್ಲಿಸತಕ್ಕದ್ದು.

ಆರ್ಥಿಕ ಯೋಜನೆಗಳನ್ವಯ ಅಥವಾ ನಿಯಮಗಳಲ್ಲಿ ಸೂಚಿಸಿರುವ ಅಧಿಕಾರದನ್ವಯ ಪ್ರಧಾನ ಕಾರ್ಯದರ್ಶಿಯವರು ನಿರ್ಣಯ ತಗೆದುಕೊಳ್ಳಬಹುದು ಹಾಗೂ ಅಧಿಕಾರಪ್ರತ್ಯಾಯೋಜನೆ ಇಲ್ಲದಿದ್ದಲ್ಲಿ ಮಾನ್ಯ ಸಚಿವರಿಗೆ ಕಡತವನ್ನು ಸಲ್ಲಿಸತಕ್ಕದ್ದು. ಈ ರೀತಿ ನಿರ್ಣಯ ತಗೆದುಕೊಂಡ ನಂತರ ಕರಡು ಆದೇಶದ ಅನುಮೋದನೆಯನ್ನು ಅಧೀನ ಕಾರ್ಯದರ್ಶಿ ಹಂತದಲ್ಲಿ ಪಡೆದು ಅಂತಿಮ ಆದೇಶ ಹೊರಡಿಸುವುದು.

ಹೊಣೆಗಾರಿಕೆ, ಮೇಲ್ವಿಚಾರಣೆ: ವಿಷಯ ನಿರ್ವಾಹಕರು ಶಾಖೆಯಲ್ಲಿ ಸ್ವೀಕೃತಿಯಾದ ಪತ್ರಗಳನ್ನು ಆ ಪತ್ರಗಳಿಗೆ ಸಂಬಂಧಪಟ್ಟಂತೆ ಕಡತಗಳಿದ್ದಲ್ಲಿ ಅದರೊಂದಿಗೆ ಸಲ್ಲಿಸುವುದು, ಇಲ್ಲದಿದ್ದಲ್ಲಿ ಹೊಸ ಕಡತವನ್ನು ತೆರೆದು ಸಲ್ಲಿಸುವುದು. ಸ್ವೀಕೃತಿಗೆ ಸಂಬಂಧಪಟ್ಟಂತೆ ವಿಷಯ ಸಂಬಂಧವಾಗಿ ಪರಿಶೀಲಿಸಿ ಕಡತವನ್ನು ಶಾಖಾಧಿಕಾರಿಗೆ ಸಲ್ಲಿಸುವುದು.

ಶಾಖಾಧಿಕಾರಿಯು ವಿಷಯ ನಿರ್ವಾಹಕರು ಸಲ್ಲಿಸಿದ ಕಡತವನ್ನು ಪರಿಶೀಲಿಸುವರು. ಅಲಂಬಿತ ಭಾಷಾಶೈಲಿ ಪರಿಶೀಲಿಸುವುದು ಇವರ ಕರ್ತವ್ಯ. ಇವರು ಕಡತದಲ್ಲಿರುವ ಟಿಪ್ಪಣಿಯನ್ನು ಸಂಬಂಧಪಟ್ಟ ನಿಯಮಗಳಿಗನುಸಾರವಾಗಿ ಪರಿಶೀಲಿಸಿ, ಹೆಚ್ಚುವರಿ ಟಿಪ್ಪಣಿಯೊಂದಿಗೆ ಮೇಲಾಧಿಕಾರಿಗೆ ಸಲ್ಲಿಸುವರು. ಶಾಖಾಧಿಕಾರಿಯವರು ಕಡತವನ್ನು ಅಧೀನಕಾರ್ಯದರ್ಶಿ/ಅಪರ/ಸಹ/ಉಪಕಾರ್ಯದರ್ಶಿ ರವರಿಗೆ ಅನುಮೋದನೆಗಾಗಿ ಸಲ್ಲಿಸುವುದು. ತುರ್ತು ಮತ್ತು ಮುಖ್ಯ ಸ್ವೀಕೃತಿಗಳನ್ನು ವಿಷಯ ನಿರ್ವಾಹಕರಿಗೆ ರವಾನಿಸದೆ ತಾವೇ ಸ್ವತ: ಸಲ್ಲಿಸಲು ಶಾಖಾಧಿಕಾರಿ/ಅಧೀನ ಕಾರ್ಯದರ್ಶಿಯವರಿಗೆ ಅಧಿಕಾರವಿದೆ.

ಪ್ರಧಾನ ಕಾರ್ಯದರ್ಶಿಯವರು ಪ್ರಕರಣಕ್ಕೆ ಸಂಬಂಧಪಟ್ಟಂತೆ ತೀರ್ಮಾನ ತೆಗೆದುಕೊಂಡು ಕಡತವನ್ನು ಹಿಂದಿರುಗಿಸುವರು. ಸರ್ಕಾರದ ನೀತಿಗಳಿಗೆ ಸಂಬಂಧಪಟ್ಟ ವಿಷಯ ಮತ್ತು ಕರ್ನಾಟಕ ಸರ್ಕಾರ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು 1977 ರ ಪ್ರಕಾರ ಸಚಿವರಿಗೆ ಸಲ್ಲಿಸಬೇಕಾದ ವಿಷಯಗಳಲ್ಲಿ ಅಂತಿಮ ತೀರ್ಮಾನಕ್ಕೆ ಕಡತವನ್ನು ಸಲ್ಲಿಸುವರು.

4 (b)(iv) ಕರ್ತವ್ಯಗಳ ನಿರ್ವಹಣೆಯಲ್ಲಿ ಅನುಸರಿಸಬೇಕಾದ ಸೂತ್ರಗಳು

ಸಚಿವಾಲಯ ಕಛೇರಿ ಕೈಪಿಡಿ ಮತ್ತು ಕರ್ನಾಟಕ ಸರ್ಕಾರ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು 1977ರ ಪ್ರಕಾರ ಕಡತ ವಿಲೇವಾರಿ ಮಾಡುವಲ್ಲಿ ಸಚಿವಾಲಯದ ಇಲಾಖೆಗಳು ಕಾರ್ಯ ನಿರ್ವಹಿಸುತ್ತಿವೆ. ಕಡತ ವಿಲೇವಾರಿ ಮಾಡುವಲ್ಲಿ ಆ ವಿಷಯಕ್ಕೆ ಸಂಬಂಧಪಟ್ಟ ವಿವಿಧ ಶಾಸನ ಮತ್ತು ನ್ಯಾಯಾಲಯದ ಆದೇಶಗಳ ಮೂಲಕ ಪರಿಶೀಲಿಸುತ್ತದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸರ್ಕಾರದ ಉಪ ಕಾರ್ಯದರ್ಶಿಗಳು ಸರ್ಕಾರದ ಅಧೀನ ಕಾರ್ಯದರ್ಶಿಗಳು ಶಾಖಾಧಿಕಾರಿಗಳು	ಪ್ರಕರಣಗಳ ಬಗ್ಗೆ ಆದ್ಯತೆಯ ಮೇಲೆ ಹಾಗೂ ತುರ್ತಾಗಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ.
ಸಹಾಯಕರು/ಹಿರಿಯ ಸಹಾಯಕರು	: ಕಡತಗಳನ್ನು/ಸ್ವೀಕೃತಿಗಳನ್ನು 5 ದಿನಗಳೊಳಗಾಗಿ ನಿರ್ವಹಿಸಬೇಕಾಗಿರುತ್ತದೆ.
ಶೀಘ್ರಲಿಪಿಗಾರರು/ಬೆರಳಚ್ಚುಗಾರರು ಕಿರಿಯ ಸಹಾಯಕರು	ಇವರು ತಮಗೆ ವಹಿಸಿದ ಕರ್ತವ್ಯಗಳನ್ನು ಆಯಾಯ ದಿನವೇ ಮುಗಿಸಬೇಕಾಗಿರುತ್ತದೆ.
ವಾಹನ ಚಾಲಕರು	:ವಾಹನವನ್ನು ಸಿದ್ದತೆಯಲ್ಲಿಡಬೇಕಾಗಿರುತ್ತದೆ.
ದಲಾಯತ್	:ಶಾಖೆಯಲ್ಲಿ ಅವರಿಗೆ ವಹಿಸಿದ ಪತ್ರಗಳನ್ನು /ಕಡತಗಳನ್ನು ಆಯಾಯ ದಿನವೇ ಅಧಿಕಾರಿಗಳ ಸೂಚನೆಯಂತೆ ಆಯಾಯ ಅಧಿಕಾರಿಗಳಿಗೆ ಮತ್ತು ಇಲಾಖೆಗಳಿಗೆ ನೀಡಬೇಕಾಗಿರುತ್ತದೆ.

4.(1)(ಬಿ) (v) ರನ್ವಯ ಅನುಸರಿಸಬೇಕಾದ ನಿಯಮ ಇತ್ಯಾದಿ ಪಟ್ಟಿ

1) ಕರ್ನಾಟಕ ನಾಗರೀಕ ಸೇವಾ ನಿಯಮಗಳು

2) ಸರ್ಕಾರಿ ನೌಕರರ ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ಕಾಯ್ದೆ ಮತ್ತು ನಿಯಮಗಳು

3) ಕರ್ನಾಟಕ ಆರ್ಥಿಕ ಸಂಹಿತೆ

4) ಕರ್ನಾಟಕ ಸರ್ಕಾರಿ ನೌಕರರ(ವೈದ್ಯಕೀಯ ಮರುಪಾವತಿ) ನಿಯಮಗಳು 1962

5) ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು 1977

6) ಸಚಿವಾಲಯ ಕೈಪಿಡಿ

7) ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಗಳು, 1966

8) ಕರ್ನಾಟಕ ನಾಗರೀಕ ಸೇವೆ (ಪರಿವೀಕ್ಷಣಾವಧಿ) ನಿಯಮಗಳು

9) ಕರ್ನಾಟಕ ನಾಗರೀಕ ಸೇವೆ (ಕಾಲಮಿತಿ ವೇತನ ಬಡ್ತಿ) ನಿಯಮಗಳು

10) ಕರ್ನಾಟಕ ನಾಗರೀಕ ಸೇವೆ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಬಡ್ತಿ) ನಿಯಮಗಳು

11)ಕರ್ನಾಟಕ ನಾಗರೀಕ ಸೇವೆ (ಜೇಷ್ಠತೆ) ನಿಯಮಗಳು

4(1)(ಬಿ) (vi) ದಾಖಲೆಗಳ ತ:ಖ್ತೆ

ಶಾಖೆ	ಕಡತ ಶೀರ್ಷಿಕೆ	ವಿಷಯ
ಸ್ವೀಮರ	ಯುಇಸೇ	ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಿಸಿದ ಸೇವಾ ವಿಷಯಗಳು
	ಸಮನ	ಯುವಜನ ಸೇವಾ ಇಲಾಖೆಗೆ ಸಂಬಂಧಿಸಿದ ಎಲ್ಲ ಸಮನ್ವಯ ವಿಷಯಗಳು
ಐಎಫ್ಎ	ಐಎಫ್ಡಬ್ಲೂ	ಆಯವ್ಯಯ ಹಾಗೂ ಆಡಿಟ್ ಪ್ಯಾರ ಹಾಗೂ ಇತರ ವಿಷಯಗಳಿಗೆ ಸಂಬಂಧಿಸಿದ ವಿಷಯಗಳು
ಯುಸೇಇ	ಯುಸೇಕ್ರೀ	ಕ್ರೀಡಾಂಗಣಗಳಿಗೆ ಸಂಬಂಧಿಸಿದ ವಿಷಯಗಳು
	ಯುಸೇಭಾ	ವಿಧಾನಸಭೆ/ವಿಧಾನಪರಿಷತ್ತು/ಭರವಸೆಗಳಿಗೆ ಸಂಬಂಧಿಸಿದ ವಿಷಯಗಳು
	ಯುರಾಸೇ	ಸರ್ಕಾರಿ ವೈಮಾನಿಕ ತರಬೇತಿ ಶಾಲೆಗೆ ಸಂಬಂಧಿಸಿದ ವಿಷಯಗಳು
ರಾಜ್ಯ ಸಂಪರ್ಕಾಧಿಕಾರಿ	ರಾಸೇಯೋ	ರಾಷ್ಟ್ರೀಯ ಸೇವಾ ಯೋಜನೆಗೆ ಸಂಬಂಧಿಸಿದ ಎಲ್ಲ ವಿಷಯಗಳು

4(1)(ಬಿ) (vii) ಇಲಾಖೆಯಲ್ಲಿ ನೀತಿ ನಿಯಮಗಳನ್ನು ಅಥವಾ ಆಡಳಿತವನ್ನು ನಡೆಸುವಲ್ಲಿ ಪಡೆಯುವ ಸಲಹಾ ಸೂತ್ರಗಳ ಅಥವಾ ಸಾರ್ವಜನಿಕ ಸದಸ್ಯರುಗಳಿಂದ ಸಲಹೆ ಪಡೆಯುವ ಬಗ್ಗೆ ಇರುವ ವ್ಯವಸ್ಥೆ ಮತ್ತು ವಿವರ:–

ರೀತಿ ನೀತಿಗಳನ್ನು ರಚಿಸುವಲ್ಲಿ ಅಥವಾ ಅನುಷ್ಠಾನಗೊಳಿಸುವಲ್ಲಿ ಸಾರ್ವಜನಿಕರೊಂದಿಗೆ ಅಥವಾ ಸಾರ್ವಜನಿಕ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ವ್ಯವಸ್ಥೆ ಇರುವುದಿಲ್ಲ. ಸಾರ್ವಜನಿಕರಿಂದ ಯಾವುದಾದರೂ ಸಲಹೆ/ ಸೂಚನೆಗಳು ಸ್ವೀಕೃತವಾದಲ್ಲಿ ಅದನ್ನು ಸರ್ಕಾರದ Policy Formulating Body ಗೆ ಕಳುಹಿಸುವುದು.

ಕಾಯ್ದೆ ಅಥವಾ ನಿಯಮಗಳಲ್ಲಿ ಪೂರ್ವಭಾವಿಯಾಗಿ ಕರಡು ಕಾಯ್ದೆ ಅಥವಾ ನಿಯಮಗಳನ್ನು ರೂಪಿಸಬೇಕೆಂದು ಉಪಬಂಧಗಳು ಇದ್ದಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಮೂಲಕ ಸದರಿ ವಿಧಾನವನ್ನು ಅನುಸರಿಸಲಾಗುವುದು.

4(1)(ಬಿ) (viii) ಇಲಾಖೆಯಲ್ಲಿರುವ ನಿಗಮ/ಪರಿಷತ್ತು/ಸಮಿತಿ ಮತ್ತು ಇತರ ಸಂಸ್ಥೆಗಳ ವಿವರ ಮತ್ತು ಅದರ ಉದ್ದೇಶ ಮತ್ತು ಈ ಸಂಸ್ಥೆಗಳ ಸಭೆಗಳು ನಡೆವಳಿಗಳು ಸಾರ್ವಜನಿಕರಿಗೆ ಲಭ್ಯವಿರುವ ಬಗ್ಗೆ:–

ಈ ಇಲಾಖೆಯ ವ್ಯಾಪ್ತಿಯಲ್ಲಿ ಈ ಕೆಳಕಂಡ ಸಂಸ್ಥೆ/ ಸಮಿತಿಗಳು ಬರುತ್ತವೆ.

1. ಕರ್ನಾಟಕ ಕ್ರೀಡಾ ಪ್ರಾಧಿಕಾರ, ಬೆಂಗಳೂರು.
2. ಎನ್.ಎಸ್.ಎಸ್.ಕೋಶದ ಸಲಹಾ ಸಮಿತಿ.
3. ರಾಷ್ಟ್ರ /ರಾಜ್ಯ ಪ್ರಶಸ್ತಿ ಆಯ್ಕೆ ಸಮಿತಿ.
4. ಕರ್ನಾಟಕ ಕ್ರೀಡಾಂಗಣ ವ್ಯವಸ್ಥಾಪಕ ಸಮಿತಿ.

4 (1)(ಬಿ) (ix) ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ನಿರ್ದೇಶಿಕೆ:–

ಕ್ರ.ಸಂ.	ಹುದ್ದೆಯ ಹೆಸರು	ಅಧಿಕಾರಿ/ನೌಕರರ ಹೆಸರು ಶ್ರೀ/ಶ್ರೀಮತಿ	ಕಛೇರಿ ದೂರವಾಣಿ ಸಂಖ್ಯೆ
1	ಸರ್ಕಾರದ ಪ್ರಧಾನ ಕಾರ್ಯದರ್ಶಿ	ಐ.ಆರ್. ಪೆರುಮಾಳ್	22255827/ 22032589

ಕ್ರ.ಸಂ.	ಹುದ್ದೆಯ ಹೆಸರು	ಅಧಿಕಾರಿ/ನೌಕರರ ಹೆಸರು ಶ್ರೀ/ಶ್ರೀಮತಿ	ಕಛೇರಿ ದೂರವಾಣಿ ಸಂಖ್ಯೆ
2	ಸರ್ಕಾರದ ಉಪ ಕಾರ್ಯದರ್ಶಿ	ಎಂ.ಎನ್. ಸೋಮಶೇಖರ್	22254393 22032598
3	ರಾಜ್ಯ ಸಂಪರ್ಕಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ(ಎನ್.ಎಸ್.ಎಸ್ ಕೋಶ)	ಡಾ॥ ಧನಂಜಯ ಕೆ.ಬಿ.	22284498 22032442
4	ಆಂತರಿಕ ಆರ್ಥಿಕ ಸಲಹೆಗಾರರು	ಬಿ.ದೇವಿಕ	22353993
5	ಸರ್ಕಾರದ ಅಧೀನ ಕಾರ್ಯದರ್ಶಿ	ಸಿ.ಶೀನಿವಾಸ್	22032596
6	ಪೀಠಾಧಿಕಾರಿ (ಯುವಜನ ಸೇವೆ)	ರಾಜಿಕಾ ಬಾನು	22032166
7	ಶಾಖಾಧಿಕಾರಿ (ಆಯವ್ಯಯ)	ಕೆ.ಎಸ್.ನಿಂಗಯ್ಯ	22032829
8	ಶಾಖಾಧಿಕಾರಿ (ಅಭಿಪ್ರಾಯ)	ಬಸವಲಿಂಗಯ್ಯ	22032713
9	ಶಾಖಾಧಿಕಾರಿ (ಸ್ವೀಮರ)	ವಿ. ಅಕ್ಷತಾ	22032170
10	ಆಪ್ತ ಕಾರ್ಯದರ್ಶಿ (ಗ್ರೇಡ್-2)	ಎಸ್.ಕುಮಾರಿ	22255827
11	ಹಿರಿಯ ಸಹಾಯಕರು (ಯುವಜನ ಸೇವೆ)	ಹನುಮಂತರಾಯಪ್ಪ.ಜಿ	22032166
12	ಭಾಷಾಂತರಕಾರರು (ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ)	ಎನ್.ಎಸ್.ಗಾಯಿತ್ರಿದೇವಿ	22255827
13	ಹಿರಿಯಸಹಾಯಕರು(ಸ್ವೀಮರ)	ಟಿ.ಎನ್.ಸೀತಾರಾಮ	22032170
14	ಹಿರಿಯಸಹಾಯಕರು(ಅಭಿಪ್ರಾಯ)	ಎ.ವಿ.ಶೈಲಜಾ	22032713
15	ಹಿರಿಯ ಸಹಾಯಕರು(ಆಯವ್ಯಯ)	ಖಾಲಿ	–
16	ಸಹಾಯಕರು(ಸ್ವೀಮರ)	ಖಾಲಿ	–
17	ಸಹಾಯಕರು(ಅಭಿಪ್ರಾಯ)	ಹೆಚ್.ಎಸ್. ಹೊನ್ನೇಗೌಡ	22032713
18	ಸಹಾಯಕರು (ಅಭಿಪ್ರಾಯ)	ಆರ್.ವಿಜಯಕುಮಾರಿ	22032713
19	ಸಹಾಯಕ(ಸ್ವೀಮರ)	ಶಾಂತರಾಜು.ವೈ.ಬಿ	22032170
20	ಸಹಾಯಕಿ(ಯುವಜನ ಸೇವೆ)	ಆರ್.ಶಾಂತಿ	22032166
21	ಸಹಾಯಕ(ಆಯವ್ಯಯ)	ಖಾಲಿ	–
22	ಕಿರಿಯಸಹಾಯಕ(ಎನ್.ಎಸ್.ಎಸ್ ಕೋಶ)	ಡಿ. ಜಯಂತ್ ಕುಮಾರ್	22032410
23	ಅಕೌಂಟೆಂಟ್(ಎನ್.ಎಸ್.ಎಸ್ ಕೋಶ)	ಖಾಲಿ	–
24	ಶೀಘ್ರಲಿಪಿಗಾರರು	ಬಿ.ಎಸ್. ಕುಬೇರ	22032410
25	ಶೀಘ್ರಲಿಪಿಗಾರರು (ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ)	ಯೋಗೀಶ ಎಂ.ವಿ.	22255827
26	ಶೀಘ್ರಲಿಪಿಗಾರರು, (ಉಪ ಕಾರ್ಯದರ್ಶಿಯವರ ಆಪ್ತ ಶಾಖೆ)	ಬಿ.ಎಂ.ವನಜಾಕ್ಷಿ	22254393
27	ಶೀಘ್ರಲಿಪಿಗಾರರು (ಆಂ.ಆ.ಸ.ಶಾಖೆ)	ಮಹಾಲಕ್ಷ್ಮೀ ರಮೇಶ್ ಕರೇಮನಿ	22032713
28	ಶೀಘ್ರಲಿಪಿಗಾರರು (ಅಧೀನಕಾರ್ಯದರ್ಶಿಯವರ ಶಾಖೆ)	ಪುಷ್ಪಲತಾ ಎಸ್.ಕೆ	22032596
29	ಕಿರಿಯಸಹಾಯಕ (ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ)	ಜಿ.ವೆಂಕಟೇಶ್	22255827
30	ಸಹಾಯಕಿ (ಎನ್ಎಸ್ಎಸ್)	ಕುಸುಮಾದೇವಿ ಎಂ.ಸಿ.	22032410
31	ಕಿರಿಯ ಸಹಾಯಕ (ಯುವಜನ ಸೇವೆ)	ಮಾಯಣ್ಣ ಗೌಡ(ಗೈರುಹಾಜರಿ)	22032166

ಕ್ರ.ಸಂ.	ಹುದ್ದೆಯ ಹೆಸರು	ಅಧಿಕಾರಿ/ನೌಕರರ ಹೆಸರು ಶ್ರೀ/ಶ್ರೀಮತಿ	ಕಛೇರಿ ದೂರವಾಣಿ ಸಂಖ್ಯೆ
32	ಕಿರಿಯ ಸಹಾಯಕ (ಉಪ ಕಾರ್ಯದರ್ಶಿಯವರ ಆಪ್ತ ಶಾಖೆ)	ಖಾಲಿ	–
33	ಕಿರಿಯ ಸಹಾಯಕಿ (ಸ್ತ್ರೀಮರ)	ಚಂದ್ರಕಲಾ ಎಸ್	22032170
34	ಬೆರಳಚ್ಚುಗಾರ (ಆಯವ್ಯಯ) / (ಅಭಿಪ್ರಾಯ)	ಖಾಲಿ	–
35	ಬೆರಳಚ್ಚುಗಾರ್ತಿ (ಸ್ತ್ರೀಮರಶಾಖೆ)	ಶ್ವೇತಾ ಎಸ್	22032170
36	ಬೆರಳಚ್ಚುಗಾರ್ತಿ (ಯುವಜನ ಸೇವೆ)	ಖಾಲಿ	–
37	ವಾಹನ ಚಾಲಕರು	ಆನಂದಕೃಷ್ಣ	22254393
38	ವಾಹನ ಚಾಲಕರು	ಎಂ.ರಾಮು	22255827
39	ದಲಾಯತ್(ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ)	ಮಂಚಮ್ಮ	22255827
40	ದಲಾಯತ್(ಎನ್‌ಎಸ್‌ಎಸ್ ಕೋಶ)	ಎನ್.ವಿ. ದೇವರಾಜ್	22032410
41	ದಲಾಯತ್ (ಸ್ತ್ರೀಮರ ಶಾಖೆ)	ಎ.ಎಸ್.ವಿಜಯಮ್ಮ	22032170
42	ದಲಾಯತ್(ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ)	ಖಾಲಿ	–
43	ದಲಾಯತ್(ಉಪ ಕಾರ್ಯದರ್ಶಿಯವರ ಆಪ್ತ ಶಾಖೆ)	ನಾರಾಯಣಶೆಟ್ಟಿ	22254393
44	ದಲಾಯತ್(ಯುವಜನಸೇವೆ ಶಾಖೆ)	ಕೃಷ್ಣಪ್ಪ(ಗೈರುಹಾಜರಿ)	22032166
45	ದಲಾಯತ್(ಅಭಿಪ್ರಾಯ ಶಾಖೆ)	ನಾಗರತ್ನಮ್ಮ	22032713
46	ದಲಾಯತ್ (ಆಯವ್ಯಯ ಶಾಖೆ)	ರತ್ನಮ್ಮ	22032829

4(1)(b)(X) ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದ ತಿಂಗಳ ವೇತನ/ಪ್ರತಿಫಲ ಮತ್ತು ಅದನ್ನು ನೀಡುವ ಸೂತ್ರಗಳು.

ನಿಯಮಗಳಲ್ಲಿ ಅವಕಾಶ ಮಾಡಿದ ವ್ಯವಸ್ಥೆಯನ್ವಯ ಪರಿಹಾರ ಭತ್ಯೆಯೊಂದಿಗೆ, ಈ ಕೆಳಕಂಡ ಮಾಸಿಕ ಮೂಲ ವೇತನವನ್ನು ಪ್ರತಿಯೊಬ್ಬ ಅಧಿಕಾರಿ/ನೌಕರರು ಪಡೆಯುತ್ತಿದ್ದಾರೆ.

ಕ್ರ. ಸಂ.	ಹುದ್ದೆಯ ಹೆಸರು	ಅಧಿಕಾರಿ/ನೌಕರರ ಹೆಸರು ಶ್ರೀ/ಶ್ರೀಮತಿ	ಮೂಲ ವೇತನ ರೂ. ಗಳಲ್ಲಿ
1	ಸರ್ಕಾರದ ಪ್ರಧಾನ ಕಾರ್ಯದರ್ಶಿ	ಐ.ಆರ್. ಪೆರುಮಾಳ್	76,410–00
2	ಸರ್ಕಾರದ ಉಪ ಕಾರ್ಯದರ್ಶಿ	ಎಂ.ಎನ್. ಸೋಮಶೇಖರ್	20,550–00
3	ರಾಜ್ಯ ಸಂಪರ್ಕಾಧಿಕಾರಿ (ಎನ್.ಎಸ್.ಎಸ್ ಕೋಶ)	ಡಾ॥ ಧನಂಜಯ ಕೆ.ಬಿ.	52,250–00
4	ಆಂತರಿಕ ಆರ್ಥಿಕ ಸಲಹೆಗಾರರು	ಬಿ.ದೇವಿಕ	20,025–00
5	ಸರ್ಕಾರದ ಅಧೀನ ಕಾರ್ಯದರ್ಶಿ	ಸಿ.ಶ್ರೀನಿವಾಸ್	25,050–00
6	ಪೀಠಾಧಿಕಾರಿ (ಯುವಜನ ಸೇವೆ)	ರಾಜಿಕಾ ಬಾನು	13,000–00
7	ಶಾಖಾಧಿಕಾರಿ (ಆಯವ್ಯಯ)	ಕೆ.ಎಸ್.ನಿಂಗಯ್ಯ	16,800–00
8	ಶಾಖಾಧಿಕಾರಿ (ಅಭಿಪ್ರಾಯ)	ಬಸವಲಿಂಗಯ್ಯ	17,250–00
9	ಶಾಖಾಧಿಕಾರಿ (ಸ್ತ್ರೀಮರ)	ವಿ. ಅಕ್ಷತಾ	13,700–00
10	ಆಪ್ತ ಕಾರ್ಯದರ್ಶಿ ಗ್ರೇಡ್–2	ಎಸ್.ಕುಮಾರಿ	14,050–00
11	ಹಿರಿಯ ಸಹಾಯಕ (ಯುವಜನ ಸೇವೆ)	ಹನುಮಂತರಾಯಪ್ಪ. ಜಿ	13,700–00

ಕ್ರ. ಸಂ.	ಹುದ್ದೆಯ ಹೆಸರು	ಅಧಿಕಾರಿ/ನೌಕರರ ಹೆಸರು ಶ್ರೀ/ಶ್ರೀಮತಿ	ಮೂಲ ವೇತನ ರೂ. ಗಳಲ್ಲಿ
12	ಭಾಷಾಂತರಕಾರರು (ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ)	ಎನ್.ಎಸ್.ಗಾಯಿತ್ರಿ ದೇವಿ	10,800–00
13	ಹಿರಿಯಸಹಾಯಕರು (ಸ್ವೀಮರ ಶಾಖೆ)	ಟಿ.ಎನ್.ಸೀತಾರಾಮ	14,400–00
14	ಹಿರಿಯಸಹಾಯಕಿ (ಅಭಿಪ್ರಾಯ ಶಾಖೆ)	ಎ.ವಿ. ಶೈಲಜಾ	11,700–00
15	ಹಿರಿಯಸಹಾಯಕರು (ಆಯವ್ಯಯ ಶಾಖೆ)	ಖಾಲಿ	–
16	ಸಹಾಯಕರು (ಅಭಿಪ್ರಾಯ ಶಾಖೆ)	ಆರ್. ವಿಜಯಕುಮಾರಿ	9,750–00
17	ಸಹಾಯಕ (ಸ್ವೀಮರ ಶಾಖೆ)	ಖಾಲಿ	–
18	ಸಹಾಯಕ (ಅಭಿಪ್ರಾಯ ಶಾಖೆ)	ಹೆಚ್.ಎಸ್. ಹೊನ್ನೇಗೌಡ	8,400–00
19	ಸಹಾಯಕ (ಸ್ವೀಮರ ಶಾಖೆ)	ಶಾಂತರಾಜು.ವೈ.ಬಿ	9,050–00
20	ಸಹಾಯಕಿ (ಯುವಜನ ಸೇವೆ ಶಾಖೆ)	ಆರ್.ಶಾಂತಿ	9,050–00
21	ಸಹಾಯಕ (ಆಯವ್ಯಯ ಶಾಖೆ)	ಖಾಲಿ	–
22	ಕಿರಿಯ ಸಹಾಯಕ (ಎನ್.ಎಸ್.ಎಸ್ ಕೋಶ)	ಡಿ. ಜಯಂತ್ ಕುಮಾರ್	13,700–00
23	ಅಕೌಂಟೆಂಟ್ (ಎನ್.ಎಸ್.ಎಸ್ ಕೋಶ)	ಖಾಲಿ	–
24	ಶೀಘ್ರಲಿಪಿಗಾರರು (ಎನ್.ಎಸ್.ಎಸ್. ಕೋಶ)	ಬಿ.ಎಸ್. ಕುಬೇರ	13,700–00
25	ಶೀಘ್ರಲಿಪಿಗಾರರು (ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ)	ಯೋಗೀಶ ಎಂ.ವಿ.	8,400–00
26	ಶೀಘ್ರಲಿಪಿಗಾರರು (ಉಪ ಕಾರ್ಯದರ್ಶಿಯವರ ಆಪ್ತ ಶಾಖೆ)	ಬಿ.ಎಂ. ವನಜಾಕ್ಷಿ	12,000–00
27	ಶೀಘ್ರಲಿಪಿಗಾರರು (ಆಂ.ಆ.ಸ.ಶಾಖೆ)	ಮಹಾಲಕ್ಷ್ಮೀ ರಮೇಶ್ ಕರೇಮನಿ	9,275–00
28	ಶೀಘ್ರಲಿಪಿಗಾರರು(ಅಧೀನಕಾರ್ಯದರ್ಶಿ ಆಪ್ತ ಶಾಖೆ)	ಪುಷ್ಪಲತಾ ಎಸ್.ಕೆ	8,600–00
29	ಕಿರಿಯಸಹಾಯಕ (ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ)	ಜಿ.ವೆಂಕಟೇಶ್	6,800–00
30	ಸಹಾಯಕಿ(ಎನ್.ಎಸ್.ಎಸ್ ಕೋಶ)	ಕುಸುಮಾದೇವಿ ಎಂ.ಸಿ.	11,100–00
31	ಕಿರಿಯ ಸಹಾಯಕ (ಯುವಜನ ಸೇವೆ ಶಾಖೆ)	ಮಾಯಣ್ಣಗೌಡ(ಗೈರುಹಾಜರಿ)	–
32	ಕಿರಿಯ ಸಹಾಯಕ (ಉಪ ಕಾರ್ಯದರ್ಶಿಯವರ ಆಪ್ತ ಶಾಖೆ)	ಖಾಲಿ	–
33	ಕಿರಿಯಸಹಾಯಕಿ (ಸ್ವೀಮರ ಶಾಖೆ)	ಚಂದ್ರಕಲಾ ಎಸ್	6,250–00
34	ಬೆರಳಚ್ಚುಗಾರ (ಆಯವ್ಯಯ ಶಾಖೆ)	ಖಾಲಿ	–
35	ಬೆರಳಚ್ಚುಗಾರ್ತಿ(ಸ್ವೀಮರ ಶಾಖೆ)	ಶ್ವೇತಾ. ಎಸ್	6,000–00

ಕ್ರ. ಸಂ.	ಹುದ್ದೆಯ ಹೆಸರು	ಅಧಿಕಾರಿ/ನೌಕರರ ಹೆಸರು ಶ್ರೀ/ಶ್ರೀಮತಿ	ಮೂಲ ವೇತನ ರೂ. ಗಳಲ್ಲಿ
36	ಬೆರಳಚ್ಚುಗಾರ (ಅಭಿಪ್ರಾಯ/ಆಯವ್ಯಯ)	ಖಾಲಿ	–
37	ಬೆರಳಚ್ಚುಗಾರ (ಯುವಜನ ಸೇವೆ ಶಾಖೆ)	ಖಾಲಿ	–
38	ವಾಹನ ಚಾಲಕರು(ಉಪ ಕಾರ್ಯದರ್ಶಿ ಶಾಖೆ)	ಆನಂದಕೃಷ್ಣ	8,200–00
39	ವಾಹನ ಚಾಲಕರು(ಪ್ರ.ಕಾರ್ಯದರ್ಶಿ ಶಾಖೆ)	ಎಂ.ರಾಮು	13,000–00
39	ದಲಾಯತ್ (ಕಾರ್ಯದರ್ಶಿಯವರ ಆಪ್ತ ಶಾಖೆ)	ಮಂಚಮ್ಮ	6,125–00
40	ದಲಾಯತ್(ಎನ್.ಎಸ್.ಎಸ್ ಶಾಖೆ)	ಶ್ರೀ ಎನ್.ವಿ. ದೇವರಾಜ್	9,275–00
41	ದಲಾಯತ್(ಸ್ವೀಮರ ಶಾಖೆ)	ಎ.ಎಸ್.ವಿಜಯಮ್ಮ	6,125–00
42	ದಲಾಯತ್ (ಪ್ರಧಾನ ಕಾರ್ಯದರ್ಶಿ ಆಪ್ತ ಶಾಖೆ)	ಖಾಲಿ	–
43	ದಲಾಯತ್ (ಉಪ ಕಾರ್ಯದರ್ಶೀಯವರ ಆಪ್ತ ಶಾಖೆ)	ನಾರಾಯಣಶೆಟ್ಟಿ	6,800–00
44	ದಲಾಯತ್(ಯುವಜನಸೇವೆ ಶಾಖೆ)	ಕೃಷ್ಣಪ್ಪ(ಗೈರು ಹಾಜರಿ)	–
45	ದಲಾಯತ್	ನಾಗರತ್ನಮ್ಮ	6,125–00
46	ದಲಾಯತ್	ರತ್ನಮ್ಮ	7,800–00

BUDGET ALLOCATION OF YOUTH SERVICES AND SPORTS DEPARTMENT DURING THE YEAR 2011-2012

2204 - SPORTS & YOUTH SERVICE

(Rs. In Lakhs)

SL. No.	Head of Account And Scheme	2011-12	
		Plan	Plan
01	2204-00-001-1-01 Directorate of Youth Service and Sports 004-Interim Relief Supplementary Grants- II	3.74	421.24
02	2204-00-101-0-02 National Physical Edu.Inst. Chikkaballapura	-	19.40
03	2204-00-101-0-04 Grants to Physical Education	-	17.20
04	2204-00-102-1-01 National Cadet Corps	100.00	3181.46
05	2204-00-102-2-03 Incentive Scholarship to high school students for participation at State/ National level sports	47.00	-
06	2204-00-103-0-02 Youth welfare programme	55.00	9.73
07	2204-00-103-0-09 CSS of NSS Programme	2594.20	-

08	2204-00-103-0-11 Bharat Scouts	60.00	75.00
09	2204-00-103-0-12 Girl Guides	20.00	31.20
10	2204-00-103-0-18 In House Activities at State Youth Center.	80.00	-
11	2204-00-104-0-02 Promotion of Sports Activities	700.00	22.15
12	2204-00-104-0-25 Sports Institutions & Hostels	930.00	60.00
13	2204-00-104-0-29 Sports Authority of Karnataka	425.00	267.47
14	2204-00-104-0-32 Rural Sports & Games	200.00	-
15	2204-00-104-0-33 Yuva Sanjivini	10.00	-
16	2204-00-196-1-01 Assistance Zilla Panchayats	1063.55	371.15
17	2204-00-198-6-11 Assistance to Gram Panchayats	1014.95	
18	2204-00-796-0-01 Sports and Games 423-Tribal Sub Place(TSP)	425.75	-
19	2204-00-800-0-15- 422- Special Component Plan(SCP)	553.00	-
20	2204-00-800-0-17 Publicity Campaign	25.00	
21	2204-00-800-0-18 Training Programme for In Service Officers & Coaches	5.00	-
22	4202-03-102-0-03 Construction of Stadia	4000.00	-
	Total	**12312.19**	**4476.06**

PART - II

3053-CIVIL AVIATION

Sl. NO.	**Head of Account**	**2011-12**	
		Plan	**Non Plan**
01	3053-80-003-0-01 Govt. Flying School	-	211.21
	Total	-	211.21

4(1)(ಬಿ) (xii) ಇಲಾಖೆಯಲ್ಲಿ ನೀಡುವ ಸಹಾಯಧನ ಕಾರ್ಯಕ್ರಮಗಳ ನಿರ್ವಹಣಾ ವಿವರ ಮತ್ತು ಅದಕ್ಕೆ ಒದಗಿಸಲಾದ ಅನುದಾನ ಮತ್ತು ಫಲಾನುಭವಿಗಳ ವಿವರಗಳು.

ಈ ಇಲಾಖೆಯಲ್ಲಿ ಸಹಾಯಧನ ನೀಡುವ ಕಾರ್ಯಕ್ರಮಗಳು ಇರುವುದಿಲ್ಲ.

4(1)(ಬಿ)(xiii) ಈ ಇಲಾಖೆಯಲ್ಲಿ ನೀಡುತ್ತಿರುವ ಪರ್ಮಿಟ್ ಅಥವಾ ಅಧಿಕಾರ ಪತ್ರಗಳ ವಿವರ ಮತ್ತು ರಿಯಾಯತಿ ಪಡೆಯುವ ವಿವರ:–

ಈ ಇಲಾಖೆಯಲ್ಲಿ ಯಾವುದೇ ಪರವಾನಗಿ ಅಧಿಕಾರ ಪತ್ರ ಮತ್ತು ರಿಯಾಯತಿ ನೀಡಲಾಗುವುದಿಲ್ಲ.

4(1)(ಬಿ) (xiv) ಇಲಾಖೆಯಲ್ಲಿರುವ ಮಾಹಿತಿಯನ್ನು ವೆಬ್ ಸೈಟ್‌ನಲ್ಲಿ ಅಳವಡಿಸಿರುವ ಬಗ್ಗೆ ವಿವರ:–

http://www.karunadu.gov.in/Pages/Default.aspx ನಲ್ಲಿ Status of Files ಲಿಂಕ್ ಅನ್ನು ಕ್ಲಿಕ್ಕಿಸಿದಾಗ ಗೋಚರವಾಗುವ Document Search ಆಪ್ಷನ್ ಅನ್ನು ಗುರುತಿಸಿ, ತದನಂತರ ಯುವಜನ ಸೇವಾ ಇಲಾಖೆಯನ್ನು ಆಯ್ಕೆ ಮಾಡಿದ ನಂತರ ಈ ಮಾಹಿತಿಯನ್ನು ಹುಡುಕಿ ಅಂತರ್ಜಾಲದಲ್ಲಿ ನೋಡಬಹುದಾಗಿದೆ.

4(1)(ಬಿ)(xv) ಇಲಾಖೆಯಲ್ಲಿ ಸಾರ್ವಜನಿಕರಿಗೆ ಮಾಹಿತಿ ಪಡೆಯಲು ಲಭ್ಯವಿರುವ ಸವಲತ್ತುಗಳು ಹಾಗೂ ಗ್ರಂಥಾಲಯ ಅಥವಾ ವಾಚನಾಲಯಗಳು ಇದ್ದಲ್ಲಿ ಅದರ ವಿವರ:–

ಸಾರ್ವಜನಿಕರು ಮಾಹಿತಿ ಪಡೆಯಲು ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಈ ಕಚೇರಿಯನ್ನು ಸಂಪರ್ಕಿಸಬಹುದು. ಸಾರ್ವಜನಿಕರಿಗೆ ಯಾವುದೇ ಗ್ರಂಥಾಲಯ ಮತ್ತು ಓದುವ ಕೋಣೆಯನ್ನು ವ್ಯವಸ್ಥೆಗೊಳಿಸಿಲ್ಲ.

4(1)(ಬಿ) (xvi) ಇಲಾಖೆಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು, ಪದನಾಮ ಮತ್ತು ಇತರ ವಿವರಗಳು:–

1. ಸಾರ್ವಜನಿಕ ಪ್ರಾಧಿಕಾರ – ಪ್ರಧಾನ ಕಾರ್ಯದರ್ಶಿಗಳು, ಯುವಜನ ಸೇವಾ ಇಲಾಖೆ, ಕೊಠಡಿ ಸಂಖ್ಯೆ: 243, 2ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಮೇಲ್ಮನವಿ ಪ್ರಾಧಿಕಾರ – ಸರ್ಕಾರದ ಉಪ ಕಾರ್ಯದರ್ಶಿ, ಯುವಜನ ಸೇವಾ ಇಲಾಖೆ, ಕೊಠಡಿ ಸಂಖ್ಯೆ: 241, 2ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸಾರ್ವಜನಿಕ ಮಾಹಿತಿ ಅಧಿಕಾರಿ– ಸರ್ಕಾರದ ಅಧೀನ ಕಾರ್ಯದರ್ಶಿ, ಯುವಜನಸೇವಾ ಇಲಾಖೆ, ಕೊಠಡಿ ಸಂಖ್ಯೆ: 236, 2ನೇ ಮಹಡಿ, ಬಹುಮಹಡಿ ಕಟ್ಟಡ , ಬೆಂಗಳೂರು.
4. ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ –

   (ಅ) ಶಾಖಾಧಿಕಾರಿ, ಯುವಜನ ಸೇವಾ ಇಲಾಖೆ, (ಯು.ಸೇ), ಕೊಠಡಿ ಸಂಖ್ಯೆ: 237, 2ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು.

   (ಆ) ಶಾಖಾಧಿಕಾರಿ, ಯುವಜನ ಸೇವಾ ಇಲಾಖೆ (ಸಮನ್ವಯ) ಕೊಠಡಿ ಸಂಖ್ಯೆ: 238, 2ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು.

4(1)(ಬಿ)(xvii)ಇತರೆ ವಿವರಗಳು; ಏನೂ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಶ್ರೀನಿವಾಸ್

ಸರ್ಕಾರದ ಅಧೀನ ಕಾರ್ಯದರ್ಶಿ,

ಯುವಜನ ಸೇವಾ ಇಲಾಖೆ.

ಪಿ.ಆರ್. 186

HOME SECRETARIAT

NOTIFICATION

No. HD 04 PCE 2012, Bangalore, Dated: 09th March, 2012

Whereas the Government of Karnataka is of the opinion that it is necessary to appoint a Commission of Inquiry to inquire into the incidents on Friday, 02-03-2012 resulting in extensive violence, burning of the private and public vehicles, physical violence between media persons and some advocates followed by police lathi charge and bursting of tear-gas shells in the premises of the Civil Court complex in Bangalore. Further, considering the public importance of the members of the Bar and members of the media and public outcry against such expensive violence, it is felt appropriate to constitute a Commission of Inquiry.

2. Now, therefore, in exercise of the powers conferred by sub-Section (1) of Section 3 of the Commission of Inquiry Act, 1952 (Central Act LX of 1952) the Government of Karnataka hereby appoints Hon'ble Mr. Justice R. G. Vaidyanath as a one man Commission of Inquiry.

3. The terms of reference of the Commission shall be as follows :

i. To enquire into the sequence of events and circumstance as well as reasons leading to the extensive violence, burning of the private and public vehicles, physical violence between media persons, advocates and police in the premises of the city civil Court complex in Bangalore which occurred on Friday, the 2nd March 2012.

ii. To identify persons and organizations responsible for the above incidents ;

iii. To ascertain whether the Police performed their duties diligently in dealing with the situation effectively and promptly ;

iv . Any other point which arises from and is connected with or incidental to any act or omission relating to the above incidents including steps and measures to be taken to prevent recurrence of such events in future.

4. The Commission of Inquiry shall submit its report within 3 months. It shall exercise all the powers under Commission of Inquiry Act, 1952 and under the Code of Civil Procedure to conduct the inquiry into the above incidents.

5. The Office of the Commission shall be located in Bangalore. The Administrative Department shall made arrangements for the office accommodation, mobility, staff, communication and other necessary infrastructure to conduct the said enquiry.

6. This order issues with the concurrence of the Finance Department vide its order No. PRS 1217 FD 2012 dated : 09-03-2012.

By Order and in the name of the Governor of Karnataka

S. M. JAAMDAR,

Principal Secretary to Government,

Home Department.

P.R. 191

REVENUE SECRETARIAT

NOTIFICATION

No. RD 37 AQB 2012, Bangalore, Dated: 03rd March, 2012

In Notification bearing No. RD 135 AQB 2009 dated 21-11-2009 the Deputy Commissioner (Land Acquisition), Bruhat Bangalore Mahanagara Palike, Bangalore (BBMP) has been appointed to perform the functions of the Deputy Commissioner under Section-4 of Land Acquisition Act, in respect of lands to be acquired in favour of the Bruhat Bangalore Mahanagara Palike, Bangalore, in the Districts of Bangalore and Bangalore, Rural.

Since the, Deputy Commissioner (Land Acquisition) has been promoted and continued in the upgraded post as JOINT Commissioner (Land Acquisition). Bruhat Bangalore Mahanagara Palike, Bangalore to carryout the land acquisition proceedings, it has been decided to appoint the said Officer instead of Deputy Commissioner (Land Acquisition) to perform the functions of the Deputy Commissioner under Section 4 of Land Acquisition Act.

Now therefore, in exercise of the powers conferred by Clause (c) of Section 3 of the Land Acquisition Act 1984 (Central Act 1 of 1894) as amended by the Land Acquisition (Karnataka Extension and Amendment) Act 1961 (Karnataka Act No. 17 of 1961), the Government of Karnataka hereby specially appoint the Joint Commissioner (Land Acquisition), Bruhat Bangalore Mahanagara Palike, Bangalore (BBMP) to perform the functions of the Deputy Commissioner under Section 4 of the said Act in respect of lands to be acquired in favour of the Bruhat Bangalore Mahanagara Palike, Bangalore, in the Districts of Bangalore and Bangalore Rural.

By Order and in the name of the Governor of Karnataka

M. VENKATESHMURTHY,

Under Secretary to Government,

Revenue Department (LAQ-2 & Rehab)

P.R. 192